ಸಂಪುಟ : 8 ಸಂಚಿಕೆ : 195 ಪುಟ : 4 ಬೆಲೆ : 3.00 ಗುರುವಾರ ಸಪ್ಟೆಂಬರ್ 07, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 195 Pages : 4 Price : 3.00 Thursday September 07, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

## ಗದಗ-ಬೆಟಗೇರಿ ಅವಳಿ ನಗರದಲ್ಲಿ ನೀರು ಪೂರೈಕೆ ಮಾಹಿತಿ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಸೆಪ್ಟೆಂಬರ್ 7 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ**

ವಾರ್ಡ್ ನಂ. 34, 35ರಲ್ಲಿ ಮೇಲಿನ ಭಾಗ, ಇ.ಡಬ್ಲ್ಯೂ.ಎಸ್, 2ನೇ ಕ್ರಾಸ್, 3ನೇ ಕ್ರಾಸ್, ಈಶ್ವರಗುಡಿ ಹಿಂದಿನ ಭಾಗ, ಧೋಬಿಘಾಟ್, ಹನುಮಾನಗುಡಿಯ ಲೈನ್, ವಾರ್ಡ್ ನಂ. 14, 13, ಹಣಗಿ ಜೀನ್ ಲೈನ್ 2ನೇ ಭಾಗಗಳು, ಟ್ಯಾಗೋರ್ ರಸ್ತೆ ಕೆಲವು ಭಾಗಗಳು, ಕುರಡಗಿಯವರ ಲೈನ್, ಜನತಾ ಗೊಡೌನ್, ವಕೀಲರ ಚಾಳ, ಗೌಸ್ ಬಿಲ್ಡಿಂಗ್, ಖಾರದ ಫ್ಯಾಕ್ಟರಿ ಲೈನ್, ಸೋನಿಯಾರ ಲೈನ್, ವಿದ್ಯಾ ಶೆಟ್ಟರ್ ಲೈನ್, ಪತ್ತೆಪೂರ ಲೈನ್, ಹೆಡ್ ಪೋಸ್ಟ್ ಲೈನ್, ಕೆ.ಸಿ.ರಾಣಿ ಪೊಲೀಸ್ ಕ್ವಾರ್ಟರ್ಸ್ ಲೈನ್, ಶಾಂತಗೇರಿ ವಕೀಲರ ಲೈನ, ವಾರ್ಡ್ ನಂ. 4 ಗೌರಿಗುಡಿ ಲೈನ್, ಬ್ಯಾಳಿಯವರ ಲೈನ್, ಟರ್ನಲ್ ಪೇಟೆ, ಕಣವಿ ಪ್ಲಾಟ್ ಭಾಗ-1, 2, 3, 275ಮನೆ ಲೈನ್, 200 ಮನೆ ಲೈನ್, ಸುಣ್ಣದಭಟ್ಟಿ ಲೈನ್, ಭಾಗಮ್ಮನ ಲೈನ್, ಶಿವರತ್ನ ಪ್ಯಾಲೇಸ್, ಬಿ.ಎಸ್,ಎನ್.ಎಲ್. ಆಫೀಸ್ ಲೈನ್,

ವಾರ್ಡ್ ನಂ. 22ರಲ್ಲಿ ಅಮರೇಶ್ವರ ನಗರ ತಾಜನಗರ, ವಾರ್ಡ್ ನಂ. 16, 18, 19 ಮಡಿವಾಳ ದೇವಸ್ಥಾನ, ಕುಂಬಾರ ಓಣಿ, ಹೊಸ ಲೈನ್ ಹಳೆ ಲೈನ್, ಬಾಗಲಕೋಟೆ ಲೈನ್, ಅಂಬೇಡ್ಕರ ನಗರ ಡೋರಗಲ್ಲಿ, ಕೋನೇರಿ ಹೊಂಡ ಹೊಸಲೈನ್, ಹನುಮಾನಗುಡಿಲೈನ್

ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸ್ವ-ಸಹಾಯ ಗುಂಪು ಸದಸ್ಯರ ನೇಮಕಾತಿಗಾಗಿ ಆಸಕ್ತ ಸದಸ್ಯರಿಂದ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಮುಂಡರಗಿ ಪುರಸಭೆಗೆ ಸ್ವಚ್ಛ ಭಾರತ 2.0 ಅಡಿಯಲ್ಲಿ ಐಇಸಿ ಚಟುವಟಿಕೆಗಳನ್ನು ಕೈಗೊಳ್ಳಲು ಸ್ವ ಸಹಾಯ ಗುಂಪು (ಎಸ್.ಎಚ್.ಜಿ/ ಎನ್.ಜಿ.ಓ ) ಸದಸ್ಯರ ನೇಮಕಾತಿಗಾಗಿ ಆಸಕ್ತ ಸದಸ್ಯರಿಂದ ಆಹ್ವಾನಿಸಲಾಗಿದೆ. 2 ವರ್ಷಗಳವರೆಗೆ ಮುಂಡರಗಿ ಪುರಸಭೆಯ ಜೊತೆಗೆ ಪೂರ್ಣಾವಧಿಗೆ ಐಇಸಿ ಚಟುವಟಿಕೆಗಳನ್ನು ಕೈಗೊಳ್ಳಲು ತಮ್ಮ ಆಸಕ್ತಿಯನ್ನು ವ್ಯಕ್ತಪಡಿಸಲು NUM-Day/NARLM/NGO ಅಡಿಯಲ್ಲಿ ನೋಂದಾಯಿತ ಎಸ್‌ಎಚ್‌ಜಿ/ ಎನ್.ಜಿ.ಓ ಸದಸ್ಯರಿಂದ ಮುಂಡರಗಿ ಪುರಸಭೆಯು ಆಸಕ್ತಿಯ ಅಭಿವ್ಯಕ್ತಿಯನ್ನು ಆಹ್ವಾನಿಸುತ್ತದೆ.

ಆಸಕ್ತ ಎಸ್ ಎಚ್ ಜಿ/ ಎನ್ ಜಿ ಓ ಸದಸ್ಯರು ತಮ್ಮ ಆಸಕ್ತಿಯ ಅಭಿವ್ಯಕ್ತಿಯನ್ನು ಓಗಏ/ ಆಚಿಥಿ/ ಓಂಖಐಒ ಹಿಂಬರಹದೊಂದಿಗೆ ಮೇಲೆ ತಿಳಿಸಲಾದ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ನಿಗದಿತ ನಮೂನೆಯಲ್ಲಿ ಸೆಪ್ಟೆಂಬರ್ 15 ರೊಳಗಾಗಿ ka.mundargi.time@gmail.com ಕಳುಹಿಸಬಹುದಾಗಿದೆ. ಆಯ್ಕೆ ಪ್ರಕ್ರಿಯೆ ಮತ್ತು ಗೌರವಧನಕ್ಕೆ ಸಂಬಂಧಿಸಿದ ವಿವರಗಳನ್ನು http://www.mundargitown.mrc.gov.in/recruitment ವೆಬ್‌ಸೈಟಿನಲ್ಲಿ ವೀಕ್ಷಿಸಬಹುದಾಗಿದೆ ಎಂದು ಮುಂಡರಗಿ ಪುರಸಭೆ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

## ಫೆಲೋಶಿಪ್‌ಗಾಗಿ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

2023-24ನೇ ಸಾಲಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಗದಗ ಇವರಿಂದ ಅಲ್ಪಸಂಖ್ಯಾತರ ಪಿ.ಎಚ್.ಡಿ/ಎಂ.ಫಿಲ್ ವಿದ್ಯಾರ್ಥಿಗಳಿಗೆ ಫೆಲೋಶಿಪ್‌ಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಹಾಗೂ ಅರ್ಹ ಅಲ್ಪಸಂಖ್ಯಾತರ (ಮುಸ್ಲಿಂ, ಜೈನ್, ಕ್ರಿಶ್ಚಿಯನ್, ಸಿಖ್, ಬೌದ್ಧ, ಪರ್ಶಿಯನ್) ವಿದ್ಯಾರ್ಥಿಗಳು ಸೇವಾ ಸಿಂಧು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಲು ಅಕ್ಟೋಬರ್ 3 ಕೊನೆಯ ದಿನವಾಗಿದೆ. ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಗಳನ್ನು ಖುದ್ದಾಗಿ ಅಭ್ಯರ್ಥಿಗಳೇ ಹಾಜರಾಗಿ, ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಗದಗ ರವರ ಕಚೇರಿಗೆ ಸಲ್ಲಿಸಬಹುದಾಗಿದೆ.

2023-24ನೇ ಸಾಲಿನಲ್ಲಿ ಪಿ.ಎಚ್.ಡಿ/ಎಂ.ಫಿಲ್‌ಗೆ ನೋಂದಣಿಯಾಗಿ ವ್ಯಾಸಂಗ ಮಾಡುತ್ತಿರುವ ಅರ್ಹ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳು ಫೆಲೋಶಿಪ್‌ಗಾಗಿ ಅರ್ಜಿ ಸಲ್ಲಿಸಬಹುದು.

ಅಭ್ಯರ್ಥಿಗಳು ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿರಬೇಕು.ಪಿ.ಎಚ್.ಡಿ/ಎಂ.ಫಿಲ್ ಯಾವುದಾದರೂ ಒಂದು ಕೋರ್ಸಗೆ ಮಾತ್ರ ಅರ್ಜಿ ಸಲ್ಲಿಸಬೇಕು. ಅಂಚೆ ತೆರಪು/ಅರೆಕಾಲಿಕ/ದೂರ ಶಿಕ್ಷಣದಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳು ಅರ್ಹರಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮೌಲಾನಾ ಆಜಾದ ಭವನ, ಜಿಲ್ಲಾ ನ್ಯಾಯಾಲಯದ ಎದುರುಗಡೆ, ಗದಗ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

### ಬಿಂಕದಕಟ್ಟಿಯಲ್ಲಿ ಅಪ್ರಾಪ್ತ ಬುದ್ಧಿಮಾಂದ್ಯ ಬಾಲಕಿ ಅತ್ಯಾಚಾರ ಪ್ರಕರಣ: ತನಿಖೆಗೆ ಆಗ್ರಹ

# ನಾಗರಿಕ ಸಮಾಜ ತಲೆ ತಗ್ಗಿಸುವ ಹೇಯ ಕೃತ್ಯ





■ ವಿಜಯಸಾಕ್ಷಿ ಸುದ್ದಿ, ಗದಗ

ತಾಲೂಕಿನ ಬಿಂಕದಕಟ್ಟಿ ಗ್ರಾಮದಲ್ಲಿ ಬುದ್ಧಿಮಾಂದ್ಯ ಅಪ್ರಾಪ್ತ ಬಾಲಕಿಯ ಅತ್ಯಾಚಾರ ಪ್ರಕರಣಕ್ಕೆ ಸಂಭಂಧಿಸಿದಂತೆ ಸರಕಾರ ಕೂಡಲೇ ಸಮಗ್ರ ತನಿಖೆ ನಡೆಸಬೇಕೆಂದು ಆಗ್ರಹಿಸಿ ಶ್ರೀರಾಮ ಸೇನೆಯ ಮುಖ್ಯಸ್ಥ ಪ್ರಮೋದ ಮುತಾಲಿಕ ನೇತೃತ್ವದಲ್ಲಿ ಶ್ರೀರಾಮ ಸೇನೆಯ ನೂರಾರು ಕಾರ್ಯಕರ್ತರು ಗದಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್ ನೇಮಗೌಡ ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರಮೋದ ಮುತಾಲಿಕ, ಗದಗ ಜಿಲ್ಲೆಯಲ್ಲಿ ಇತ್ತೀಚೆಗೆ ಬಾಲಕಿಯರು, ಮಹಿಳೆಯರ ಮೇಲೆ ಅತ್ಯಾಚಾರ ಪ್ರಕರಣಗಳು ಹೆಚ್ಚುತ್ತಿವೆ. ಕಳೆದ ಆರು ತಿಂಗಳಿನಲ್ಲಿ ಗದಗ ಜಿಲ್ಲೆಯಲ್ಲಿ ಮಹಿಳೆಯರು, ಬಾಲಕಿಯರ ಮೇಲೆ ದೌರ್ಜನ್ಯ, ಅತ್ಯಾಚಾರ ಪ್ರಕರಣಗಳು ಹೆಚ್ಚಿವೆ. ಇದು ನಾಗರಿಕ ಸಮಾಜ ತಲೆ ತಗ್ಗಿಸುವಂತಹ ಹೀನ ಕಾರ್ಯವಾಗಿದೆ. ವಿಪರ್ಯಾಸವೆಂದರೆ, ಬಹುತೇಕ ಪ್ರಕರಣಗಳು ಬೆಳಕಿಗೆ ಬರದೇ ಅಲ್ಲಲ್ಲಿಯೇ ಮುಚ್ಚಿ ಹೋಗುತ್ತಿವೆ. ಜಿಲ್ಲೆಯಲ್ಲಿ ಪೊಲೀಸ್ ವ್ಯವಸ್ಥೆ

> ಕಳೆದ ಹದಿನೈದು ದಿನಗಳ ಹಿಂದೆ ಬಿಂಕದಕಟ್ಟಿ ಗ್ರಾಮದಲ್ಲಿ ಅಮಾಯಕ, ಅಪ್ರಾಪ್ತ ಬುದ್ಧಿಮಾಂದ್ಯ ಬಾಲಕಿಯ ಮೇಲೆ ಒಂದು ನಿರ್ದಿಷ್ಟ ಕೋಮಿಗೆ ಸೇರಿದ ಯುವಕನೋರ್ವ ಅತ್ಯಾಚಾರವೆಸಗಿದ್ದಾನೆ. ದುರ್ದೈವದ ಸಂಗತಿಯೆಂದರೆ, ಪೊಲೀಸರು ಅತ್ಯಾಚಾರಿ ಯುವಕನ ಮೇಲೆ ಸಣ್ಣಪುಟ್ಟ ಪ್ರಕರಣ ದಾಖಲಿಸಿ ಕೈತೊಳೆದುಕೊಂಡಿದ್ದಾರೆ. ಯುವಕ ಅಪ್ರಾಪ್ತನೆಂದು ಸುಳ್ಳು ದಾಖಲೆ ಸೃಷ್ಟಿಸಿ, ಬಾಲಮಂದಿರದಲ್ಲಿರಿಸಿದ್ದಾರೆ. ಇದು ಅನ್ಯಾಯದ ಪರಮಾವಧಿಯಾಗಿದೆ.
>
> **- ಪ್ರಮೋದ್ ಮುತಾಲಿಕ.**
> ಶ್ರೀರಾಮ ಸೇನೆಯ ಸಂಸ್ಥಾಪಕರು.

ಸಂಪೂರ್ಣವಾಗಿ ವಿಫಲವಾಗಿದೆ. ಸಮಾಜದಲ್ಲಿನ ದುರುಳರು ಇದನ್ನೇ ಬಂಡವಾಳ ▸▸ 3ನೇ ಪುಟಕ್ಕೆ

### ಐತಿಹಾಸಿಕ ಕಾರ್ಯಕ್ರಮವನ್ನು ಮೆಲುಕು ಹಾಕಲು ಕೆಪಿಸಿಸಿ ವತಿಯಿಂದ ಆಯೋಜನೆ


# 'ಭಾರತ್ ಜೋಡೋ ಯಾತ್ರೆ'ಯ ವಾರ್ಷಿಕೋತ್ಸವ ಆಚರಣೆ ಇಂದು

■ ವಿಜಯಸಾಕ್ಷಿ ಸುದ್ದಿ, ಗದಗ

ಎಐಸಿಸಿ ಮುಖಂಡ ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ನಡೆದ ಐತಿಹಾಸಿಕ 'ಭಾರತ್ ಜೋಡೋ ಯಾತ್ರೆ'ಯ ಮೊದಲ ವಾರ್ಷಿಕೋತ್ಸವದ ನೆನಪಿಗಾಗಿ ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಗುರುವಾರ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಜಿಲ್ಲಾ ಮಟ್ಟದ 'ಭಾರತ್ ಜೋಡೋ ಯಾತ್ರೆ ವಾರ್ಷಿಕೋತ್ಸವ ಆಚರಣೆ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸಂಜೆ 4ಕ್ಕೆ ನಗರದ ಮಹಾತ್ಮ ಗಾಂಧಿ ವೃತ್ತದಿಂದ ನಗರದ ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿರುವ ಜಿಲ್ಲಾ ಕಾಂಗ್ರೆಸ್ ಕಚೇರಿಯವರೆಗೆ ಪಾದಯಾತ್ರೆ ಮೆರವಣಿಗೆ ನಡೆಯಲಿದೆ. ಕಾರ್ಯಕ್ರಮದಲ್ಲಿ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ ಪಾಟೀಲ, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಹಾಗೂ ರೋಣ ಶಾಸಕ ಜಿ.ಎಸ್ ಪಾಟೀಲ, ಕೆಪಿಸಿಸಿ ಉಪಾಧ್ಯಕ್ಷ, ಮಾಜಿ ಶಾಸಕ ಡಿ.ಆರ್ ಪಾಟೀಲ, ಮಾಜಿ ಶಾಸಕ ಬಿ.ಆರ್ ಯಾವಗಲ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸುಜಾತಾ ದೊಡ್ಡಮನಿ ಸೇರಿದಂತೆ ಹಲವು ಮುಖಂಡರು ಪಾಲ್ಗೊಳ್ಳಲಿದ್ದಾರೆ.

ಕಾಂಗ್ರೆಸ್ ಪಕ್ಷದ ಮಾಜಿ ಹಾಗೂ ಹಾಲಿ ಶಾಸಕರು, ಪಕ್ಷದ ಜಿಲ್ಲಾ ಪಧಾದಿಕಾರಿಗಳು, ಬ್ಲಾಕ್ ಕಾಂಗ್ರೆಸ್, ಜಿಲ್ಲಾ ಪಂಚಾಯತ, ತಾಲೂಕು ಪಂಚಾಯತ, ಗ್ರಾಮ ಪಂಚಾಯತ, ಎಪಿಎಂಸಿ ಪಕ್ಷದ ಅಧ್ಯಕ್ಷರು ಹಾಗೂ ಸದಸ್ಯರು, ನಗರಸಭೆ, ಪಟ್ಟಣ ಪಂಚಾಯತ,




ಪುರಸಭೆ ಅಧ್ಯಕ್ಷರು ಹಾಗೂ ಸದಸ್ಯರು, ಮಹಿಳಾ ಕಾಂಗ್ರೆಸ್, ಯುವ ಕಾಂಗ್ರೆಸ್, ಎಸ್ಸಿ/ಎಸ್ಟಿ, ಅಲ್ಪಸಂಖ್ಯಾತರ, ವಿದ್ಯಾರ್ಥಿ ಕಾಂಗ್ರೆಸ್, ಕಾಂಗ್ರೆಸ್ ಸೇವಾದಳ, ಹಿಂದುಳಿದ ವರ್ಗ, ಸಾಮಾಜಿಕ ಜಾಲತಾಣ, ರಾಜೀವಗಾಂಧಿ ಪಂಚಾಯತ ಸಂಘಟನೆ, ಮಾಜಿ ಸೈನಿಕರ ವಿಭಾಗ, ಮೀನುಗಾರ, ಕಾರ್ಮಿಕರ ವಿಭಾಗ, ಐಎನ್‌ಟಿಯುಸಿ, ಕಾನೂನು ಮತ್ತು ಮಾನವ ಹಕ್ಕು, ಕಿಸಾನ್ ಮತ್ತು ಖೇತ್ ಮಜದೂರ, ಮಾಜಿ ಸೈನಿಕರ ವಿಭಾಗ, ವೈದ್ಯರ ವಿಭಾಗ, ವೃತ್ತಿಪರ ವಿಭಾಗ, ಪದವೀಧರ ಹಾಗೂ ಶಿಕ್ಷಕರ ವಿಭಾಗ, ನೀತಿ ಮತ್ತು ಸಂಶೋಧನೆ ತರಬೇತಿ, ವಿಕಲಚೇತನರ ವಿಭಾಗ, ಲಿಗಲ್ ರೀಪರ್ಮ್ಸ್ ವಿಭಾಗ, ಐಟಿ ಮತ್ತು ಡಾಟಾ ವಿಭಾಗ, ಮಾಧ್ಯಮ ವಿಭಾಗಗಳ ಅಧ್ಯಕ್ಷರು ಹಾಗೂ ಸದಸ್ಯರು, ಪಕ್ಷದ ಅಭಿಮಾನಿಗಳು ಪಾಲ್ಗೊಳ್ಳಬೇಕೆಂದು ಗದಗ-ಬೆಟಗೇರಿ ಶಹರ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ಬಿ ಅಸೂಟಿ ಹಾಗೂ ಗದಗ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಅಶೋಕ ಮಂದಾಲಿ ವಿನಂತಿಸಿದ್ದಾರೆ.

## ಸೆ. 11,12ರಂದು ಗದಗ ತಾಲೂಕು ಮಟ್ಟದ ದಸರಾ ಕ್ರೀಡಾಕೂಟ

■ ವಿಜಯಸಾಕ್ಷಿ ಸುದ್ದಿ, ಗದಗ

2023-24ನೇ ಸಾಲಿನ ಗದಗ ತಾಲೂಕು ಮಟ್ಟದ ದಸರಾ ಕ್ರೀಡಾಕೂಟಗಳನ್ನು ಪುರುಷ ಹಾಗೂ ಮಹಿಳೆಯರಿಗೆ ಸೆಪ್ಟೆಂಬರ್ 11 ಮತ್ತು 12 ರಂದು ನಗರದ ಕೆ.ಎಚ್. ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಸಲಾಗುವುದು.

ಆಸಕ್ತ ಕ್ರೀಡಾಪಟುಗಳು ತಮ್ಮ ಹೆಸರನ್ನು ಸೆಪ್ಟೆಂಬರ್ 9 ರೊಳಗಾಗಿ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಗಳು, ಗದಗ ತಾಲೂಕು ಇವರಲ್ಲಿ ನೊಂದಾಯಿಸಿಕೊಳ್ಳುವುದು ಕಡ್ಡಾಯವಾಗಿದೆ. ಸೆಪ್ಟೆಂಬರ್ 11 ರಂದು ಬೆಳಿಗ್ಗೆ 9 ಗಂಟೆಗೆ ಉದ್ಘಾಟನೆ ಸಮಾರಂಭ ಜರುಗುವುದು. ಉದ್ಘಾಟನಾ ಸಭಾರಂಭಕ್ಕೆ ಗದಗ ತಾಲೂಕಿನ ಆಸಕ್ತಿ ಕ್ರೀಡಾಪಟುಗಳು ಹಾಜರಾಗಬೇಕು. ಇದೇ ಸಮಯದಲ್ಲಿ ಕ್ರೀಡಾಕೂಟಗಳನ್ನು ಏರ್ಪಡಿಸಲಾಗುವುದು.

**ಪುರುಷರಿಗಾಗಿ ಅಥ್ಲೆಟಿಕ್ಸ್ ಸ್ಪರ್ಧೆಗಳು:** 100 ಮೀ. 200 ಮೀ, 400 ಮೀ. 800 ಮೀ. 1500 ಮೀ. 5000 ಮೀ 10000 ಮೀ ಓಟ ಉದ್ದ ಜಿಗಿತ, ಎತ್ತರ ಜಿಗಿತ, ಟ್ರಿಪಲ್ ಜಂಪ್, ಗುಂಡು ಎಸೆತ ಜಾವಲಿನ ಎಸೆತ, ಚಕ್ರ ಎಸೆತ, 110ಮೀ ಹರ್ಡಲ್ಸ್, 4*100 ಮೀ. ರಿಲೇ, 4*400 ಮೀ. ರಿಲೇ **ಗುಂಪು ಸ್ಪರ್ಧೆಗಳು:** ವಾಲಿಬಾಲ್, ಕಬಡ್ಡಿ, ಖೋ-ಖೋ, ಥ್ರೋ ಬಾಲ್, ಪುಟ್‌ಬಾಲ್.

**ಮಹಿಳೆಯರಿಗಾಗಿ ಅಥ್ಲೆಟಿಕ್ಸ್:** 100ಮೀ. 200ಮೀ, 400ಮೀ. 800ಮೀ. 1500ಮೀ. 3000,ಮೀ ಓಟ ಉದ್ದ ಜಿಗಿತ, ಎತ್ತರ ಜಿಗಿತ, ಟ್ರಿಪಲ್ ಜಂಪ್, ಗುಂಡು ಎಸೆತ, ಜಾವಲಿನ ಎಸೆತ, ಚಕ್ರ ಎಸೆತ, 100ಮೀ ಹರ್ಡಲ್ಸ್, 4*100 ಮೀ. ರಿಲೇ, 4*400 ಮೀ. ರಿಲೇ.

**ಗುಂಪು ಸ್ಪರ್ಧೆಗಳು:** ವಾಲಿಬಾಲ್, ಕಬಡ್ಡಿ, ಖೋ-ಖೋ, ಥ್ರೋ ಬಾಲ್.

ಗದಗ ತಾಲೂಕು ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳು ಗದಗ ತಾಲೂಕಿನವರೇ ಆಗಿರಬೇಕು.

ಹಾಗೂ ಆಧಾರ ಕಾರ್ಡ್ ಅಥವಾ ಗ್ರಾಮ ಪಂಚಾಯತಿಯ ರಹವಾಸಿ ಪತ್ರ ಸದರಿ ದಿನದಂದು ಹಾಜರಪಡಿಸಬೇಕು. ಹೆಚ್ಚಿನ ಮಾಹಿತಿಗಾಗಿ ಎಂ,ಎಸ್.ಕುಚಬಾಳ, ಸಹಾಯಕ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಗಳು, ಗದಗ ಮೊ.ದೂರವಾಣಿ ಸಂ.9449814341 ಮೂಲಕ ಸಂಪರ್ಕಿಸಬಹುದಾಗಿದೆ.

## 'ಪಶು ಸಂಜೀವಿನಿ' ಆಂಬ್ಯುಲೆನ್ಸ್ ಸದುಪಯೋಗಪಡಿಸಿಕೊಳ್ಳಿ



■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಪಶು ವೈದ್ಯ ಇಲಾಖೆಯ ಬಹುದಿನಗಳ ಕನಸು ಇದೀಗ ಸಾಕಾರಗೊಂಡಿದ್ದು, ರೈತರ ಜಾನುವಾರುಗಳಿಗೆ ತುರ್ತು ಚಿಕಿತ್ಸೆಯನ್ನು ನೀಡುವುದಕ್ಕಾಗಿ 1962 ಸಹಾಯವಾಣಿ ತೆರೆಯಲಾಗಿದೆ. ರೈತ ಬಾಂಧವರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಶಾಸಕ ಡಾ. ಚಂದ್ರು ಲಮಾಣಿ ಹೇಳಿದರು.

ಅವರು ಬುಧವಾರ ಶಿರಹಟ್ಟಿಯ ಪಶು ಆಸ್ಪತ್ರೆಯಲ್ಲಿ ಪಶು ಸಂಜೀವಿನಿ ಅಂಬ್ಯುಲೆನ್ಸ್‌ಗೆ ಹಸಿರು ನಿಶಾನೆ ತೋರಿಸುವುದರ ಮೂಲಕ ಚಾಲನೆ ನೀಡಿ ಮಾತನಾಡಿದರು.

ಈ ಅಂಬ್ಯುಲೆನ್ಸ್ ಸೇವೆಯು ವೈದ್ಯರು ಹಾಗೂ ಔಷಧಿಗಳೊಂದಿಗೆ ಸಿದ್ಧವಾಗಿದೆ. ತಾಲೂಕಿನಲ್ಲಿ 7 ಆಸ್ಪತ್ರೆಗಳಿದ್ದರೂ ಸಹ ಸಮರ್ಪಕ ಪಶುವೈದ್ಯರ ಕೊರತೆಯನ್ನು ಎದುರಿಸುತ್ತಿದ್ದು, ಇದೀಗ ತಕ್ಕ ಮಟ್ಟಿಗೆ ಈ ಸೇವೆಯಿಂದ ರೈತರಿಗೆ ಅನುಕೂಲವಾಗಲಿದೆ. ರಸ್ತೆ ಸರಿ ಇಲ್ಲದ ಗ್ರಾಮೀಣ ಪ್ರದೇಶಗಳಲ್ಲಿ ಅಂಬ್ಯುಲೆನ್ಸ್ ಸೇವೆ ಕಷ್ಟಸಾಧ್ಯ. ಇಂತಹ ಸಂದರ್ಭಗಳಲ್ಲಿ ರೈತರು ಸಹಕರಿಸಿ ▸▸ 3ನೇ ಪುಟಕ್ಕೆ

## ನಗರಸಭೆಯಲ್ಲಿ ಶ್ರೀಕೃಷ್ಣ ಜನ್ಮಾಷ್ಠಮಿ ಆಚರಣೆ



■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ನಗರಸಭೆಯಲ್ಲಿ ಬುಧವಾರ ಶ್ರೀ ಕೃಷ್ಣ ಜನ್ಮಾಷ್ಟಮಿಯ ನಿಮಿತ್ತ ಶ್ರೀಕೃಷ್ಣ ದೇವರ ಭಾವಚಿತ್ರಕ್ಕೆ ಗದಗ-ಬೆಟಗೇರಿ ನಗರಸಭೆ ಅಧ್ಯಕ್ಷೆ ಉಷಾ ಎಂ.ದಾಸರ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷೆ ಸುನಂದಾ ಬಾಕಳೆ, ಪೌರಾಯುಕ್ತ ಗಂಗಪ್ಪ ಎಂ.ಕಚೇರಿ, ವ್ಯವಸ್ಥಾಪಕ ಪಿ.ಎಫ್ ಶೇರಖಾನೆ, ಸಹಾಯಕ ಕಾರ್ಯಪಾಲಕ ಅಭಿಯಂತರ ಎಚ್.ಎ ಬಂಡಿವಡ್ಡರ, ಲೆಕ್ಕಾಧೀಕ್ಷಕ ಟಿ.ಎಚ್ ದ್ಯಾವನೂರ, ಸಿಎಓ ಶೋಭಾ ಮಾಳೆಕೊಪ್ಪ, ಪರಿಸರ ಅಭಿಯಂತರ ಆನಂದ ಬದಿ, ಎ.ಎನ್ ಪುಣೇಕರ, ಕೆ.ಟಿ ಯಾದವಾಡ, ಎಸ್.ವಾಯ್ ಸಂಕನಗೌಡ್ರ, ಸಿಂಧು ಗಾಳಿ, ಜೆ.ಇ ವೆಂಕಟೇಶ ರಾಮಗಿರಿ, ಎಂ.ಎಂ ಮಕಾನದಾರ, ನಾಗೇಶ ಗೊರಣ್ಣವರ, ಸುಷ್ಮಾ ಗುಡಿ, ಎಂ.ಎಂ ಮುಜಾವರ, ಎಸ್.ಎನ್ ದಳವಾಯಿ, ಎಸ್.ಎಮ್ ಮಕಾನದಾರ, ಆರ್.ಎಚ್ ಬಾಕಳೆ, ರಾಕೇಶ ಮುಟಗಿ ಬಿ.ಜಿ ಹಿರೇಮಠ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

### ಗೃಹಸಚಿವ ಜಿ.ಪರಮೇಶ್ವರ ವಿರುದ್ಧ ಆಕ್ರೋಶ ಹೊರಹಾಕಿದ ಪ್ರಮೋದ ಮುತಾಲಿಕ್

# ಬೇರೆ ಧರ್ಮ ಇದ್ದಿದ್ದರೆ ನೀವು ಮಂತ್ರಿಯಾಗುತ್ತಿರಲಿಲ್ಲ

■ ವಿಜಯಸಾಕ್ಷಿ ಸುದ್ದಿ, ಗದಗ

ಸನಾತನ ಧರ್ಮ ಅತ್ಯಂತ ಪುರಾತನ ಧರ್ಮವಾಗಿದೆ. ಸೂರ್ಯ ಯಾವಾಗ ಹುಟ್ಟಿದ ಅಂತ ಕೇಳೋಕಾಗತ್ತಾ? ಚಂದ್ರ, ಭೂಮಿ ಯಾವಾಗ ಉದಯಿಸಿದವು ಅಂತ ಪ್ರಶ್ನೆ ಮಾಡಕ್ಕಾಗುತ್ತಾ? ಇದರರ್ಥ, ಅವು ಅಸ್ತಿತ್ವದಲ್ಲೇ ಇಲ್ಲ ಅಂತಲಾ? ಸನಾತನ ಧರ್ಮ ಅತ್ಯಂತ ಪುರಾತನದಿಂದ ಬಂದಿದ್ದು. ಅಂದಿಗೂ ಇಂದಿಗೂ ಜೀವಂತವಾಗಿದೆ. ಇಂತಹ ಧರ್ಮದ ಕುರಿತು ವ್ಯಂಗ್ಯವಾಡುವುದು ಸರಿಯಲ್ಲ ಎಂದು ಶ್ರೀರಾಮ ಸೇನಾ ಸಂಸ್ಥಾಪಕ ಪ್ರಮೋದ ಮುತಾಲಿಕ್ ಆಕ್ರೋಶ



ವ್ಯಕ್ತಪಡಿಸಿದರು.


ಬುಧವಾರ ನಗರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಮಾಧ್ಯಮದವರೊಂದಿಗೆ ಮಾತನಾಡುತ್ತ, ಹಿಂದೂ ಧರ್ಮದ ಹುಟ್ಟಿನ ಬಗ್ಗೆ ಗೃಹಸಚಿವ ಜಿ.ಪರಮೇಶ್ವರ ಅವರು ಪ್ರಶ್ನೆ ಮಾಡಿರುವ ವಿಚಾರದ ಕುರಿತು ಪ್ರತಿಕ್ರಿಯಿಸಿದ ಮುತಾಲಿಕ್, ಹಿಂದೂ ಧರ್ಮ ಇರುವುದರಿಂದಲೇ ನೀವು ಬದುಕುತ್ತಿದ್ದೀರಿ. ನೀವು ಗೃಹಸಚಿವರಾಗಿದ್ದೇ ಹಿಂದೂ ಧರ್ಮದಿಂದ. ಬೇರೆ ಧರ್ಮ ಇದ್ದಿದ್ದರೆ ನೀವು ಮಂತ್ರಿ ಆಗುತ್ತಿರಲಿಲ್ಲ. ನಿಮಗೆ ಮುಸ್ಲಿಂ, ಕ್ರಿಶ್ಚಿಯನ್ ಧರ್ಮದ ಬಗ್ಗೆ ಮಾತನಾಡುವ ಧೈರ್ಯ ಇದೆಯಾ? ನಾವು ತಾಳ್ಮೆಯಿಂದ ಇದ್ದೇವೆಂದು ಏನು ಬೇಕಾದರೂ ಮಾತನಾಡಬೇಡಿ ಎಂದು ಎಚ್ಚರಿಸಿದರು.

> ಇದನ್ನು ವಾಕ್ ಸ್ವಾತಂತ್ರ್ಯ ಎನ್ನುವುದಿಲ್ಲ. ನಾನು ಇದನ್ನು ಸ್ವೇಚ್ಛಾಚಾರ ಎಂದು ಕರೆಯುತ್ತೇನೆ. ಹಿಂದೂ ಧರ್ಮದಲ್ಲಿಯೇ ಹುಟ್ಟಿ, ಹಿಂದೂ ಧರ್ಮದ ಬಗ್ಗೆ ಅವಮಾನ ಮಾಡಬೇಡಿ. ಹಿಂದೂ ಧರ್ಮದಲ್ಲಿ ನ್ಯೂನತೆಗಳಿದ್ದರೆ ಅವುಗಳನ್ನು ಸರಿಪಡಿಸೋಣ. ಆದರೆ, ಹಿಂದೂ ಧರ್ಮವನ್ನೇ ನಾಶ ಮಾಡುತ್ತೇನೆ ಅಂದರೆ ನಡೆಯುವುದಿಲ್ಲ.
>
> **- ಪ್ರಮೋದ್ ಮುತಾಲಿಕ್.**
> ಶ್ರೀರಾಮ ಸೇನಾ ಸಂಸ್ಥಾಪಕರು.

ಪ್ರಕಾಶ್ ರಾಜ್ ಅವರ ತಂದೆ ಸನಾತನ ▸▸ 3ನೇ ಪುಟಕ್ಕೆ

# ಸತ್ಯದಿಂದ ಭಾರತದ ಕುಟುಂಬ ವ್ಯವಸ್ಥೆ ಉಳಿದಿದೆ

■ವಿಜಯಸಾಕ್ಷಿ ಸುದ್ದಿ, ನವದೆಹಲಿ



ಪ್ರಪಂಚದಾದ್ಯಂತ ಕುಟುಂಬ ವ್ಯವಸ್ಥೆಯು ಅವನತಿಯತ್ತ ಸಾಗುತ್ತಿದ್ದರೆ, ಭಾರತದಲ್ಲಿ ಸತ್ಯದಿಂದ ಕುಟುಂಬ ವ್ಯವಸ್ಥೆ ಸುಭದ್ರವಾಗಿದೆ ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ನಾಗ್ಪುರದ ಕಾರ್ಯಕ್ರಮವೊಂದರಲ್ಲಿ ಹೇಳಿದ್ದರು.

ಮೋಹನ್ ಭಾಗವತ್ ಅವರ ಹೇಳಿಕೆಯ ಬಗ್ಗೆ ತರಾಟೆಗೆ ತೆಗೆದುಕೊಂಡಿರುವ ನೆಟ್ಟಿಗರು, ವಿಶ್ವದಲ್ಲಿ ಅತಿ ಹೆಚ್ಚು ಜಾತಿ/ವರ್ಣಮಯ ವ್ಯವಸ್ಥೆ ಭಾರತದಲ್ಲಿ ಮಾತ್ರ ಇದೆ. ನಿಮ್ಮ ಸಂಘ, ನಿಮ್ಮ ಸಂಘದ ಹೆಸರಿನಿಂದ ಅಧಿಕಾರಕ್ಕೆ ಬಂದಿರುವ ಸರ್ಕಾರ ಏನು ಮಾಡುತ್ತಿದೆ ಎಂದು ಪ್ರಶ್ನಿಸಿದ್ದಾರೆ.

ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ದಲಿತರ, ಅಲ್ಪಸಂಖ್ಯಾತರ ಶೋಷಣೆಯ ಬಗ್ಗೆ ಬಿಜೆಪಿ ಸರ್ಕಾರ ಮೌನವಹಿಸಿದೆ. ನಿಮ್ಮದೆ ಆಡಳಿತವಿರುವ ಉತ್ತರ ಭಾರತದ ರಾಜ್ಯಗಳಲ್ಲಿ ದಲಿತರು, ಆದಿವಾಸಿಗಳನ್ನು ಹಿಂಸಿಸಲಾಗುತ್ತಿದೆ. ಹಾಡಹಗಲಲ್ಲೇ ಕ್ರೂರವಾಗಿ ಥಳಿಸಿ ಹತ್ಯೆ ಮಾಡಲಾಗುತ್ತಿದೆ. ಇದೂ ಕೂಡ ಭಾರತದ ನಿಜವಾದ ವ್ಯವಸ್ಥೆ ಎಂದು ಹಲವರು ಟ್ವಿಟರ್ ಹಾಗೂ ಫೇಸ್‌ಬುಕ್‌ನಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈಗಲೂ ದಲಿತ, ಹಿಂದಿಳಿದವರನ್ನು ಮುಟ್ಟಿಸಿಕೊಳ್ಳುತ್ತಿಲ್ಲ, ಮನೆಗಳಿಗೆ ಸೇರಿಸುತ್ತಿಲ್ಲ. ದೇಗುಲಕ್ಕೆ ಪ್ರವೇಶ ನೀಡುತ್ತಿಲ್ಲ. ಬಹಿಷ್ಕಾರ ನೀಡುವ ಸಾವಿರಾರು ಘಟನೆಗಳು ನಿತ್ಯ ಭಾರತದಲ್ಲಿಯೇ ನಡೆಯುತ್ತಿದೆ ಎಂದು ಮೋಹನ್ ಭಾಗವತ್ ಅವರಿಗೆ ನೆಟ್ಟಿಗರು ಹಲವು ಉದಾಹರಣೆಗಳನ್ನು ನೀಡಿದ್ದಾರೆ.

ಮಂಗಳವಾರ ಮಹಾರಾಷ್ಟ್ರದ ನಾಗ್ಪುರ ನಗರದಲ್ಲಿ ಹಿರಿಯ ನಾಗರಿಕರ ಸಭೆಯನ್ನುದ್ದೇಶಿಸಿ ಮಾತನಾಡಿದ ಭಾಗವತ್, "ನಮ್ಮ ಸಂಸ್ಕೃತಿಯ ಬೇರುಗಳು 'ಸತ್ಯ'ದ ಮೇಲೆ ಆಧಾರಿತವಾಗಿವೆ. ಆದರೂ ಈ ಸಂಸ್ಕೃತಿಯನ್ನು ಬೇರುಸಹಿತ ಕಿತ್ತುಹಾಕಲು ಪ್ರಯತ್ನಿಸಲಾಗುತ್ತಿದೆ. ಕೆಲವರು ತಮ್ಮ ಸ್ವಾರ್ಥದ ಉದ್ದೇಶದಿಂದ ಲೌಕಿಕ ಸುಖಗಳನ್ನು ಪೂರೈಸುವ ಈ ಪ್ರವೃತ್ತಿಯನ್ನು ಸರಿ ಎಂದು ಸಮರ್ಥಿಸಲು ಪ್ರಯತ್ನಿಸುತ್ತಾರೆ. ಇದನ್ನು ಇಂದು ಸಾಂಸ್ಕೃತಿಕ ಮಾರ್ಕ್ಸ್‌ವಾದ ಎಂದು ಕರೆಯಲಾಗುತ್ತದೆ" ಎಂದು ಹೇಳಿದ್ದರು.

## ಶ್ರೀಕೃಷ್ಣ ಜನ್ಮಾಷ್ಟಮಿಯ ನಿಮಿತ್ತ ಶ್ರೀಹರಿಯ ಸ್ಮರಣೆ

# ಹರಿಯ ನೆನೆಯಿರೋ ನಮ್ಮ...

ಕೃಷ್ಣನ ಜನನವನ್ನು ಕೇಳಿದ್ದೇವೆ, ಬಾಲ್ಯದ ಹುಡುಗಾಟವನ್ನು ಕೇಳಿ, ಓದಿ, ನೋಡಿ ಸಂತಸಪಟ್ಟಿದ್ದೇವೆ. ಶೌರ್ಯವನ್ನು ಕೊಂಡಾಡಿದ್ದೇವೆ. ಅವನಂತೆ ನಮ್ಮ ಮಕ್ಕಳು ಆಗಲಿ ಎಂದು ಮಕ್ಕಳಿಗೆ ಕಥೆ ಹೇಳಿಕೊಂಡು ಬಂದಿದ್ದೇವೆ. ಅಘ, ಬಕ, ಚಾಣೂರ, ಶಿಶುಪಾಲ, ದಂತವಕ್ರ, ಕಂಸ, ಮುರ, ಕಾಲಯವನ, ನರಕಾಸುರ ಹೀಗೆ ಅನೇಕ ರಕ್ಕಸರನ್ನು ಧ್ವಂಸ ಮಾಡಿದ ವೀರತ್ವದ ಗುಣಗಾನ ಮಾಡಿದ್ದೇವೆ. ಪಾಂಡವರ, ದ್ರೌಪದಿಯ ತಲೆ ಕಾಯ್ದ ಇತಿಹಾಸವನ್ನು ಕೇಳಿ ಬೆಳೆಯುತ್ತಿದ್ದೇವೆ. ಶ್ರೀಕೃಷ್ಣನಿಗೆ ಎಂತಹ ಶ್ರೀಮಂತಿಕೆ ಇದ್ದರೂ ಆತ ಗುರುಪರಂಪರೆಯಲ್ಲಿ ಸಾಮಾನ್ಯ ಬಾಲಕರ ನಡುವೆ ವಿದ್ಯೆಯನ್ನು ಕಲಿತು ಗುರುಗಳಿಗೆ ಹೆಸರು ತಂದಿದ್ದನ್ನು ಕೇಳಿದ್ದೇವೆ. ಗುರು ಹಿರಿಯರಿಗೆ ಗೌರವವನ್ನು ಹೇಗೆ ಕೊಡಬೇಕೆಂಬುದನ್ನು ಓದಿದ್ದೇವೆ. ಅವನ ಹೆಸರಿನ ಧಾರಾವಾಹಿಗಳಲ್ಲಿ ನೋಡಿದ್ದೇವೆ. ಬಡ ಮಿತ್ರನನ್ನು ಆದರಿಸಿ ಗೌರವಿಸಿದ ಕಥೆಯಂತೂ ಅವಿಸ್ಮರಣೀಯ. ಎಷ್ಟೋ ತಿಳಿಯದ, ತಿಳಿದ ಕಥೆಯನ್ನು ಕಲಿತಿದ್ದೇವೆ. ಆದರೆ, ಅಷ್ಟೇ ಬೇಗ ಅವನ್ನು ಮೂಲೆಗೆ ಒತ್ತುವ ಪ್ರಯತ್ನವನ್ನು ಮಾಡುತ್ತಿದ್ದೇವೆ! ವರ್ಷಕ್ಕೊಮ್ಮೆ ವೇಷಭೂಷಣಗಳೊಂದಿಗೆ ಜಾಗೃತರಾಗುತ್ತೇವೆ. ಅದೂ ಸಹಾ ಆ ದಿನಕ್ಕೆ ಮಾತ್ರ.

ಸಾಮಾನ್ಯ ಜನರೂ ಪ್ರೀತಿಸುವ ಏಕೈಕ ದೈವವೆಂದರೆ ಅದು ಕೃಷ್ಣ ಮಾತ್ರ! ಆಬಾಲವೃದ್ಧರಾದಿಯಾಗಿ ನಮ್ಮ ಬೆಣ್ಣೆ ಕೃಷ್ಣನನ್ನು ಭಕ್ತಿಯಿಂದ ಆರಾಧಿಸುವರೋ ಇಲ್ಲವೋ, ಆದರೆ ಬೆಣ್ಣೆಯಂತ ಮನಸ್ಸಿಟ್ಟು ಪ್ರೀತಿಯಿಂದ ಆರಾಧಿಸುವುದಂತೂ ಸತ್ಯ. ಸಣ್ಣಮಕ್ಕಳಿಗಂತೂ ಮುದ್ದು ಮುದ್ದಾಗಿ ಅಲಂಕರಿಸಿ, ತಮ್ಮ ಮನೆಯ ಕಂದನೇ ಶ್ರೀಕೃಷ್ಣ ಪರಮಾತ್ಮ ಎಂಬಂತೆ ಕಣ್ಣು ತುಂಬಿಕೊಳ್ಳುತ್ತಾರೆ. ಇದು ಅಂದಿನಿಂದ ಇಂದಿನವರೆಗೂ ನಡೆದುಕೊಂಡು ಬಂದ ಸಂಪ್ರದಾಯ ಹಾಗೂ ಸಂಸ್ಕೃತಿಯನ್ನು ಉಳಿಸಿಕೊಳ್ಳುವ ಒಂದು ಕಟಿಬದ್ಧ ಪ್ರಯತ್ನವೂ ಹೌದು. ಇದು ಯಾವ ಒತ್ತಡಕ್ಕೂ ಒಳಗಾಗದೆ ನಡೆದುಕೊಂಡು ಬಂದ ನಮ್ಮ ಸಂಸ್ಕೃತಿಯಾಗಿದೆ. ಎಲ್ಲ ಮತಧರ್ಮದವರು ಕೂಡ ತಮ್ಮ ಚಂದದ ಮುದ್ದು ಕಂದಮ್ಮಗಳಿಗೆ ಕೃಷ್ಣನ ಅಲಂಕಾರ ಮಾಡಿ ಸಂತೋಷಪಡುವವರೂ ಇದ್ದಾರೆ.

ನಾರಾಯಣನ 9ನೇ ಅವತಾರವಾದ ಶ್ರೀಕೃಷ್ಣನ ಅವತಾರ ನಮಗೆಲ್ಲಾ ಅತೀ ಹತ್ತಿರದ ಅವತಾರವಾಗಿದೆ. ಎಲ್ಲರಿಗೂ ಪ್ರಿಯನಾದವನು, ಎಲ್ಲಾ ಕಾವ್ಯಗಳಿಗೂ ಸಿಗುವವನು, ಕಥಾನಾಯಕ ಆದವನು ಸ್ವಯಂ ಭಗವಂತ ಶ್ರೀಕೃಷ್ಣ. 'ಕೃಷ್ಣಸ್ತು ಭಗವಾನ್ ಸ್ವಯಂ', 'ಈಶ್ವರಃ ಪ್ರೇಮಃ ಕೃಷ್ಣಃ' ಎನ್ನುತ್ತವೆ ವೇದಗಳು. ಪುರಾಣದ ಋಷಿವರ್ಯರಿಂದ ಹಿಡಿದು, ದಾಸಶ್ರೇಷ್ಠರಾದಿಯಾಗಿ, ಈಗಿನ ಕವಿವರ್ಯರ ಕಾವ್ಯ ಪುಂಜದಲ್ಲಿ, ಭಕ್ತಿರಸದಲ್ಲಿ ಮಿಂದೇಳುವವನು ನಮ್ಮ ಮುರಳಿ.



ಮನುಷ್ಯಮಾನಸದಲ್ಲಷ್ಟೇ ಅಲ್ಲದೆ ಪಶುಪಕ್ಷಿಯಲ್ಲೂ, ತರುಲತೆಗಳಲ್ಲೂ, ಪಂಚತತ್ವಗಳಲ್ಲೂ ಮನೆಮಾಡಿನಿಂತ ಸುಕುಮಾರ, ಸ್ಫುರದ್ರೂಪಿ, ಕಲಾನಿಧಿ, ವಿವೇಕಿ, ಚಾಣಾಕ್ಷ, ದಕ್ಷ, ಜ್ಞಾನನಿಧಿ, ಸೂತ್ರಧಾರಿ, ಮಹಾಧೀರ ಧೌರೇಯ, ಧರ್ಮ ಪ್ರವರ್ತಕ, ಸ್ನೇಹಿತ, ಪ್ರೇಮಿ, ಯೋಗಾಚಾರ್ಯ, ಗೀತಾಚಾರ್ಯ..... ಅಬ್ಬಾ, ಒಂದೇ ಎರಡೇ ಇವನ ನಾಮಾಂಕಿತ! ನೂರಾರು ಬಿರುದುಗಳಿಗೆ ತಕ್ಕವನೆಂದೆನಿಸಿದವನು ನಮ್ಮ ಆರಾಧ್ಯ ದೈವ ಶ್ರೀಕೃಷ್ಣ.

ಇದರ ನೆನಪುಗಳನ್ನು ನಾನೇಕೆ ಇಲ್ಲಿ ಪ್ರಸ್ತುತಪಡಿಸುತ್ತಿರುವೆ ಎಂದರೆ, ಅನೇಕ ತಂದೆ-ತಾಯಿಯರು ಕೃಷ್ಣ ಜನ್ಮಾಷ್ಟಮಿ ಆಚರಣೆಗೋಸ್ಕರ ವೇಷಭೂಷಣಗಳನ್ನು ತೊಡಿಸಿ ಒಂದು ದಿನ ಕೃಷ್ಣನನ್ನು ಮಾಡಿ ಆನಂದಿಸುತ್ತಾರೆ. ಆದರೆ ಒಂದು ದಿನದ ಆನಂದವನ್ನು ಆನಂದಿಸುವುದಲ್ಲ...ನಿಮ್ಮ ನಿಜವಾದ ಆನಂದ ಸಿಗುವುದು ಆತನ ಲೀಲೆಗಳನ್ನು ನಾವು ಅರ್ಥೈಸಿಕೊಂಡಾಗ ಮಾತ್ರ.

ಪ್ರತೀ ಬಾರಿ ಎಡವಿಬಿದ್ದಾಗ ಎದ್ದು ನಿಲ್ಲುವ ಸಾಹಸಪ್ರವೃತ್ತಿಯ ಕೃಷ್ಣನ ಕಥಾಮೃತವನ್ನು ಮಕ್ಕಳ ಕಿವಿಯಮೇಲೆ ಬೀಳಿಸಿ, ಬಾಲಲೀಲೆಯ ಕಥೆಗಳನ್ನು ಹೇಳಿ ಪ್ರೋತ್ಸಾಹ ನೀಡಿ, ಧರ್ಮ ಪ್ರವರ್ತಕನ ಧರ್ಮಸಾರವನ್ನು ಹಾಡುಗಳ ಮೂಲಕ ಪ್ರವಹಿಸಿ, ಪ್ರತೀಬಾರಿ ಕಿವಿಯಮೇಲೆ ಬೀಳುತ್ತಿದ್ದರೆ ಒಂದಲ್ಲಾ ಒಂದು ನೆನಪಲ್ಲಿ ಉಳಿದೇ ಉಳಿಯುತ್ತದೆ. ತಮ್ಮ ವಿವೇಚನೆಯಲ್ಲಿ ಯಾವುದು ತನಗೆ ಹತ್ತಿರವಾಗುವುದೋ ಅದನ್ನು ಮಗು ಪಾಲಿಸುತ್ತದೆ. ಅದು ಕೃಷ್ಣನಾಗಿರಬಹುದು, ರಾಮನಾಗಿರಬಹುದು, ಏಸು, ಅಲ್ಲಾಹ್ ಯಾವುದೇ ಭಗವಂತನ ರೂಪವನ್ನು ಅಳೆಯುವುದು ನಾವು ವೇಷದಿಂದಲ್ಲ, ಕೃತಿಯಿಂದ. ಯೋಧ, ಯೋಗಿ, ಹಿತೈಷಿ, ಜ್ಞಾನ, ಶಕ್ತಿಯ ರೂಪ ಇಂತಹ ವಿಚಾರಗಳನ್ನು ನಾವು ಧಾರೆಯೆರೆಯೋಣ. ಯಾವುದೇ ರೂಪವಿಟ್ಟರೂ ಆ ರೂಪಕ್ಕೊಂದು ಅರ್ಥವನ್ನು ಕಟ್ಟಿಕೊಡೋಣ. ಏನಂತೀರಿ.....?

**ಕೃಷ್ಣಂ ವಂದೇ ಜಗದ್ಗುರುಂ**

– ಸಿ.ಎನ್ ಭಾಗ್ಯಲಕ್ಷ್ಮೀ ನಾರಾಯಣ. ಮೈಸೂರು.

# ಮೆಕ್ಯಾನಿಕ್ ಮನೆಯನ್ನು ಬಿಡದ ಕಳ್ಳರು; ಬಂಗಾರದ ಆಭರಣಗಳ ಕದ್ದು ಪರಾರಿ

■ವಿಜಯಸಾಕ್ಷಿ ಸುದ್ದಿ, ಬೆಟಗೇರಿ

ಯಾರೋ ಕಳ್ಳರು ಮನೆಗೆ ಹಾಕಿದ್ದ ಬೀಗವನ್ನು ಮೀಟಿ ಮನೆಯಲ್ಲಿದ್ದ ಸಾವಿರಾರು ರೂ. ಮೌಲ್ಯದ ಬಂಗಾರದ ಆಭರಣಗಳನ್ನು ದೋಚಿಕೊಂಡು ಹೋಗಿರುವ ಘಟನೆ ನಡೆದಿದೆ.

ಬೆಟಗೇರಿಯ ಮಂಜುನಾಥ್ ನಗರದ ವಾಂಬೆ ಬಡಾವಣೆಯ ವೃತ್ತಿಯಲ್ಲಿ ಮೆಕ್ಯಾನಿಕ್ ಆಗಿರುವ ಪರಶುರಾಮ ತಂದೆ ಸಂಗಪ್ಪ ಸೂರ್ಯವಂಶಿ ಇವರ ಮನೆಯ ಬಾಗಿಲಿಗೆ ಹಾಕಿದ್ದ ಬೀಗವನ್ನು ಮುರಿದು ಈ ಕೃತ್ಯ ಮಾಡಿದ್ದಾರೆ.

ಮನೆಯಲ್ಲಿ ಬೆಡ್ ರೂಂನಲ್ಲಿದ್ದ ಟ್ರಝರಿಯ ಲಾಕರ್ ನ್ನು ಯಾವುದು ವಸ್ತುವಿನಿಂದ ಮೀಟಿ ತಗೆದು ಅದರಲ್ಲಿದ್ದ 89ಸಾವಿರದ 250ರೂ.ಗಳ ಮೌಲ್ಯದ 25.5 ಗ್ರಾಮ ತೂಕದ ಬಂಗಾರದ ಆಭರಣಗಳನ್ನು ಕಳ್ಳತನ ಮಾಡಿಕೊಂಡು ಹೋಗಿದ್ದಾರೆ.

ಈ ಕುರಿತು ಬೆಟಗೇರಿ ಬಡಾವಣೆ ಪೊಲೀಸ್ ಠಾಣೆಯಲ್ಲಿ 0068/2023 ಕಲಂ 454,380 ರ ಐಪಿಸಿ ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

# ಪರಿಷ್ಕೃತ ದರಪಟ್ಟಿ; ಆಕ್ಷೇಪಣೆ ಸಲ್ಲಿಕೆಗೆ ಅವಕಾಶ

■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಹಿರಿಯ ಉಪನೋಂದಣಿ ಕಚೇರಿ ಹುಬ್ಬಳ್ಳಿ (ಉತ್ತರ) ವ್ಯಾಪ್ತಿಯ 2023-24ನೇ ಸಾಲಿನ ಹಾಲಿ ದರಪಟ್ಟಿಯಲ್ಲಿರುವ ಬಡಾವಣೆ ಜೊತೆಗೆ ಕೆಲವೊಂದು ಹೊಸ ಬಡಾವಣೆಗಳನ್ನು ಸೇರ್ಪಡಿಸಲಾಗಿದ್ದು, ಹಾಲಿ ಇರುವಂತಹ ಮಾರ್ಗಸೂಚಿ ಮಾರುಕಟ್ಟೆ ಬೆಲೆಗಳನ್ನು ಪರಿಷ್ಕರಿಸಿ ಪರಿಷ್ಕೃತ ದರಪಟ್ಟಿಯನ್ನು ತಯಾರಿಸಲಾಗಿದೆ.

ಈ ಕುರಿತು ಸಾರ್ವಜನಿಕರ ಆಕ್ಷೇಪಣೆಗಳಿದ್ದಲ್ಲಿ 15 ದಿನಗಳೊಗಾಗಿ ಉಪನೋಂದಣಾಧಿಕಾರಿಗಳ ಕಾರ್ಯಲಯಕ್ಕೆ ಲಿಖಿತ ರೂಪದ ಪೂರಕ ದಾಖಲಾತಿಗಳೊಂದಿಗೆ ಆಕ್ಷೇಪಣೆಗಳನ್ನು ಸಲ್ಲಿಸಬಹುದು. ಅವಧಿ ನಂತರ ಬಂದಂತಹ ಆಕ್ಷೇಪಣೆ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಉಪನೋಂದಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸ್ಪರ್ಧಾತ್ಮಕ ಪ್ರಪಂಚದಲ್ಲಿ ಕೌಶಲ್ಯಗಳನ್ನು ಬೆಳೆಸಿಕೊಳ್ಳಿ

■ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ

ಪರಾವಲಂಬನೆಗಿಂತ ಸ್ವಾವಲಂಬನೆಯ ಬದುಕು ರೂಪಿಸಿಕೊಳ್ಳಲು ಬೆರಳಚ್ಚು ಕಲಿಕೆ ಮೈಲಿಗಲ್ಲಾಗಿದೆ ಎಂದು ತೆಗ್ಗಿನಮಠದ ವರಸದ್ಯೋಜಾತ ಶಿವಾಚಾರ್ಯ ಶ್ರೀಗಳು ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ನಡುವಿನಕೇರಿಯಲ್ಲಿ ಶೀ ಮಹಾತ್ಮಗಾಂಧಿ ವಾಣಿಜ್ಯ ಮತ್ತು ಕಂಪ್ಯೂಟರ್ ವಿದ್ಯಾಲಯದ ಸುವರ್ಣ ಮಹೋತ್ಸವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಕರ್ನಾಟಕ ಪಠ್ಯ ಪುಸ್ತಕ ಸಂಘದ ನಿವೃತ್ತ ನಿರ್ದೇಶಕ ವೀರಣ್ಣ ಎಸ್.ಜತ್ತಿ ಮಾತನಾಡಿ, ಶಿಸ್ತು, ಸಮಯಪಾಲನೆ ಮತ್ತು ಕಲಿಕೆ ಬದುಕಿಗೆ ಬೆಳಕಾಗಿವೆ. ನನ್ನಂತಹ ಸಾವಿರಾರು ಶಿಸ್ತಿನ ಸಿಪಾಯಿಗಳನ್ನು ಶಿಕ್ಷಿತರನ್ನಾಗಿಸಿದ ಕೀರ್ತಿ ಹರಪನಹಳ್ಳಿ ಶೈಕ್ಷಣಿಕ ಇತಿಹಾಸಕ್ಕೆ ನಾಂದಿಯಾಗಿದೆ ಎಂದರು. ಬೆಂಗಳೂರು ಮಹಾರಾಣಿ



ಕಾಲೇಜಿನ ನಿವೃತ್ತ ಪ್ರಾಚಾರ್ಯ ಹೆಚ್.ಎಂ ಜಗದೀಶ್ ಮಾತನಾಡಿ, ಸ್ಪರ್ಧಾತ್ಮಕ ಯುಗದಲ್ಲಿ ಕೌಶಲ್ಯಗಳನ್ನು ಬೆಳೆಸಿಕೊಳ್ಳಿ. ಕಂಪ್ಯೂಟರ್ ಜ್ಞಾನ ಪ್ರತಿಯೊಬ್ಬರಿಗೂ ಅತ್ಯಗತ್ಯ. ಮೊಬೈಲ್ ಅವಶ್ಯವಿದ್ದರೂ, ಮಕ್ಕಳಲ್ಲಿ ಅದು ಗೀಳಾಗಿ ಪರಿಣಮಿಸದಂತೆ ಜಾಗೃತೆ ವಹಿಸಿ ಎಂದರು.

ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಚಾರ್ಯ ಕೆ.ಪಿ ಕುಲಕರ್ಣಿಯವರಿಗೆ ವಿಶೇಷ ಗೌರವ ಸಮರ್ಪಣೆ ಮಾಡಲಾಯಿತು. ಬೆರಳಚ್ಚು ಮತ್ತು ಕಂಪ್ಯೂಟರ್ ತರಬೇತಿಯಲ್ಲಿ ಉತ್ತಮ ಅಂಕ ಗಳಿಸಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಟಿಎಂಎಇ ಸಂಸ್ಥೆಯ ಕಾರ್ಯದರ್ಶಿ ಚಂದ್ರಶೇಖರಯ್ಯ, ಸಂಸ್ಥೆಯ ನಿವೃತ್ತ ಪ್ರಾಂಶುಪಾಲ ಕೆ.ಪಿ ಕುಲಕರ್ಣಿ, ಶಿಕ್ಷಕ ಗಾದಿಲಿಂಗಪ್ಪ, ಶಿವಮೂರ್ತಿ ಹಿರೇಮಠ್, ಸಂಸ್ಥೆಯ ಮಾಲೀಕರಾದ ಬಲ್ಲಾ ಮಂಜುಳಾ, ಉಪನ್ಯಾಸಕ ಬಲ್ಲಾ ಕೃಷ್ಣಮೂರ್ತಿ, ಎಸ್‌ಯುಜೆಎಂ ಕಾಲೇಜಿನ ಪ್ರಾಚಾರ್ಯ ಮಲ್ಲಿಕಾರ್ಜುನ್ ಹೆಚ್.ಬಣಕಾರ, ಅಂಬ್ಲಿ ಯೋಗೀಶ್, ಗಿರೀಶ್ ಮುಂತಾದವರಿದ್ದರು.

# ನಾಳೆ ವಿವಿಧ ಸ್ಥಾಯಿ ಸಮಿತಿಗಳ ಅಧ್ಯಕ್ಷರ ಚುನಾವಣೆ

■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ 22ನೇ ಅವಧಿಗೆ 3 ಸ್ಥಾಯಿ ಸಮಿತಿಗಳಿಗೆ ಅಧ್ಯಕ್ಷರುಗಳ ಚುನಾವಣೆಯು ಸೆಪ್ಟೆಂಬರ್ 8 ರಂದು ಬೆಳಿಗ್ಗೆ 9 ಗಂಟೆಯಿಂದ ಮಹಾನಗರ ಪಾಲಿಕೆಯ ಸಭಾಭವನದಲ್ಲಿ ಜರುಗಲಿದೆ.

ಬೆಳಿಗ್ಗೆ 9 ಗಂಟೆಯಿಂದ 10 ಗಂಟೆಯವರೆಗೆ ಅಧ್ಯಕ್ಷರ ಚುನಾವಣೆ ನಾಮಪತ್ರಗಳನ್ನು ವಿತರಿಸಲಾಗುವುದು. ಬೆಳಿಗ್ಗೆ 10 ಗಂಟೆಯಿಂದ 11 ಗಂಟೆಯವರೆಗೆ ನಾಮಪತ್ರಗಳನ್ನು ಸ್ವೀಕರಿಸಿ, ನಂತರ 11 ಗಂಟೆಗೆ ಚುನಾವಣೆ ಪ್ರಕ್ರಿಯೆ ಪ್ರಾರಂಭವಾಗಲಿದೆ. 11 ಗಂಟೆಯ ನಂತರ ನಾಮಪತ್ರ ಪರಿಶೀಲನೆ, ನಾಮಪತ್ರಗಳ ವಿವರಗಳನ್ನು ಓದುವುದು, ನಾಮನಿರ್ದೇಶನ ಪತ್ರಗಳನ್ನು ಹಿಂತೆಗೆದುಕೊಳ್ಳುವುದು, ಉಮೇದುವಾರರ ಪಟ್ಟಿ ಘೋಷಣೆ, ಅವಶ್ಯವಿದ್ದಲ್ಲಿ ಮತದಾನ, ಮತಗಳ ಏಣಿಕೆ ಹಾಗೂ ಫಲಿತಾಂಶ ಘೋಷಿಸಲಾಗುವುದು ಎಂದು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಿಕ್ಷಕರು ತಾಳ್ಮೆಯ ಮೂರ್ತಿಗಳು

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ



ಗಂಧದಗುಡಿ ಬಳಗ ಹಾಗೂ ಕರ್ನಾಟಕ ಪ್ರಜಾಪರ ವೇದಿಕೆಯ ವತಿಯಿಂದ ಶಿಕ್ಷಕರ ದಿನಾಚರಣೆಯ ಪ್ರಯುಕ್ತ ಪಟ್ಟಣದ ಅರಳು ವಿಶೇಷ ಅಗತ್ಯತೆಯುಳ್ಳ ಬುದ್ಧಿಮಾಂದ್ಯ ಮಕ್ಕಳ ವಸತಿ ರಹಿತ ಶಾಲೆಯ ಶಿಕ್ಷಕರನ್ನು ಗೌರವಿಸಿ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು.

ಈ ಸಂದರ್ಭದಲ್ಲಿ ಗಂಧದ ಗುಡಿ ಬಳಗದ ಗದಗ ಜಿಲ್ಲಾಧ್ಯಕ್ಷ ಹಸನ್ ತಹಸೀಲ್ದಾರ ಮಾತನಾಡಿ, ಮನುಷ್ಯನೊಬ್ಬನನ್ನು ಸಮಾಜದಲ್ಲಿ ಒಳ್ಳೆಯ ವ್ಯಕ್ತಿಯಾಗಿ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ. ಅರಳು ವಿಶೇಷ ಅಗತ್ಯತೆಯುಳ್ಳ ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆಯ ಶಿಕ್ಷಕರು ನಿಜಕ್ಕೂ ತಾಳ್ಮೆಯ ಮೂರ್ತಿಗಳು. ಏನೂ ಅರಿಯದ ಮಕ್ಕಳಿಗೆ ಪ್ರತಿಯೊಂದನ್ನೂ ಕಲಿಸಿಕೊಡುವ ಸೇವೆಯನ್ನು ಮಾಡುತ್ತಿದ್ದಾರೆಂದು ಮೆಚ್ಚುಗೆ ವ್ಯಕ್ತಪಡಿಸಿ, ಇಂತಹ ಸ್ಥಳಗಳಲ್ಲಿ ಆಚರಿಸುವ ಶಿಕ್ಷಕರ ದಿನಾಚರಣೆ ಹೆಚ್ಚು ಅರ್ಥಪೂರ್ಣವಾಗಿರುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮುಖ್ಯೋಪಾಧ್ಯಾಯೆ ನೀಲಮ್ಮ ದಾಸಪ್ಪನವರ, ಲಲಿತಾ ದಾಸಪ್ಪನವರ, ನೇತ್ರಾ ತಳಗೇರಿ, ಮಂಗಳ, ಗೌರಮ್ಮ, ಅಕ್ಕಮ್ಮ, ಕೊರದಾಳ, ರೂಪ ಸಂಟಿ, ಗೌರವ್ವ ಹಿರೇಮಠ, ಮಲ್ಲಪ್ಪ ಹೊಂಗಲ್, ಶರೀಫ ಗುಡಿಮನಿ, ಸುನೀಲಗೌಡ ಪಾಟೀಲ, ಕಿರಣ ನಡುವಿನಕೇರಿ, ಕಳಕಪ್ಪ ಬಿಸನಳ್ಳಿ ಮುಂತಾದವರಿದ್ದರು.

# ಕುಡಿಯುವ ನೀರಿನ ಶುದ್ಧತೆಯ ಬಗ್ಗೆ ಎಚ್ಚರಿಕೆಯಿರಲಿ

■ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ



ಕುಲಷಿತ ನೀರಿನ ಸೇವನೆಯಿಂದ ಉಂಟಾಗುವ ಅನಾರೋಗ್ಯದ ಅನಾಹುತಗಳನ್ನು ತಡೆಗಟ್ಟಲು ಮುಂಜಾಗೃತಾ ಕ್ರಮಗಳನ್ನು ಕೈಗೊಳ್ಳುವುದು ಸೂಕ್ತ ಎಂದು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ರೇಣುಕಾದೇವಿ ಹೇಳಿದರು.

ತಾಲೂಕಿನ ಚಿಗಟೇರಿ ಗ್ರಾಮದ ಪರಿಶಿಷ್ಟ ಜಾತಿಯ ಕಾಲೋನಿಯಲ್ಲಿ ಕುಡಿಯುವ ನೀರಿನ ಪೈಪ್‌ಗಳು ಚರಂಡಿಯಲ್ಲಿ ಹಾದು ಹೋಗಿದ್ದನ್ನು ಪರಿಶೀಲಿಸಿ, ಕೂಡಲೇ ಪೈಪ್‌ಗಳನ್ನು ಸ್ಥಳಾಂತರಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದರು. ಕುಲಷಿತ ನೀರಿನ ಸೇವನೆಯಿಂದ ಆಗುವ ಅನಾಹುತಗಳನ್ನು ಸಾರ್ವಜನಿಕರಿಗೆ ವಿವರಿಸಿದರು. ಈಗಾಗಲೇ ತಾಲೂಕಿನ ಕೆಲ ಗ್ರಾಮಗಳಲ್ಲಿ ಕುಡಿಯುವ ನೀರಿನ ಪೈಪ್‌ಗಳು ಚರಂಡಿ ಹಾಗೂ ಮಲಿನ ನೀರಿನೊಂದಿಗೆ ಬೆರೆತು ವಾಂತಿ-ಭೇದಿಯಿಂದ ನರಳಿದ ಉದಾಹರಣೆಗಳಿವೆ. ರಾಜ್ಯದ ಕೆಲವೆಡೆ ಕುಲಷಿತ ನೀರಿನ ಸೇವನೆಯಿಂದ ಮೃತಪಟ್ಟ ಘಟನೆಗಳು ಜರುಗಿವೆ. ಆದ್ದರಿಂದ, ಈ ಬಗ್ಗೆ ಮುನ್ನೆಚ್ಚರಿಕೆ ವಹಿಸುವುದು ಸೂಕ್ತ. ಮಳೆಗಾಲದಲ್ಲಿ ನೀರಿನ ಸೇವನೆಯ ಬಗ್ಗೆ ಅರಿವಿರಲಿ. ಕುದಿಸಿ ಆರಿಸಿದ ನೀರನ್ನು ಸೇವಿಸಿದರೆ ಉತ್ತಮ. ಸ್ವಚ್ಛ ನೀರು‌ಉತ್ತಮ ಆಹಾರ ಸೇವನೆಯಿಂದ ಆರೋಗ್ಯ ಹಾಗೂ ನೆಮ್ಮದಿಯನ್ನು ಪಡೆಯಬಹುದು ಎಂದು ಕಿವಿಮಾತು ಹೇಳಿದರು.

## ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿ.ಪಂ ಯೋಜನಾಧಿಕಾರಿ ಮಡಿವಾಳರ ಅಧಿಕಾರಿಗಳಿಗೆ ಸೂಚನೆ

# ಕಾಮಗಾರಿಗಳು ವಿಳಂಬವಾಗದಂತೆ ಕಾರ್ಯನಿರ್ವಹಿಸಿ

■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಗ್ರಾಮೀಣ ಭಾಗದಲ್ಲಿ ಹಲವಾರು ಯೋಜನೆಗಳು ಚಾಲ್ತಿಯಲ್ಲಿವೆ. ಯಾವುದೇ ಯೋಜನೆಗಳ ಕಾಮಗಾರಿಗಳು ವಿಳಂಬವಾಗದಂತೆ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾ ಪಂಚಾಯತಿಯ ಮುಖ್ಯ ಯೋಜನಾಧಿಕಾರಿಗಳಾದ ದೀಪಕ ಮಡಿವಾಳರ ಹೇಳಿದರು.

ತಾಲೂಕು ಆಡಳಿತಸೌಧದ ತಾಲೂಕು ಪಂಚಾಯತ ಸಭಾಭವನದಲ್ಲಿ ನಡೆದ ಪ್ರಗತಿ ಪರಿಶೀಲನಾ (ಕೆಡಿಪಿ) ಸಭೆಯಲ್ಲಿ ಅವರು ಮಾತನಾಡಿದರು.

ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರು, ರಸ್ತೆಗಳು, ಸಾರಿಗೆ ಸೇರಿದಂತೆ ಹಲವಾರು ಸಮಸ್ಯೆಗಳು ಉಲ್ಬಣವಾಗುತ್ತಿವೆ. ಹೀಗಾಗಿ ತಮ್ಮ ವ್ಯಾಪ್ತಿಯಲ್ಲಿ ಕಂಡು ಬರುವ ಸಮಸ್ಯೆಗಳನ್ನು ಆದಷ್ಟು ಬೇಗ ಪರಿಹರಿಸಬೇಕು. ಅಲ್ಲದೇ ಬಾಕಿ ಉಳಿದ ಯೋಜನೆಗಳ ಕಾಮಗಾರಿಗಳನ್ನು ಶೀಘ್ರಗತಿಯಲ್ಲಿ ಪೂರ್ಣಗೊಳಿಸಬೇಕು ಎಂದರು.

ಜಿಲ್ಲೆಯಲ್ಲಿ ಜೂನ್ ತಿಂಗಳಲ್ಲಿ ಮಳೆ ಕೊರತೆಯಿಂದಾಗಿ ಬಿತ್ತನೆ ತುಸು ವಿಳಂಬವಾಗಿದೆ. ಜುಲೈ ತಿಂಗಳಲ್ಲಿ ಶೇ. 80 ರಷ್ಟು ಬಿತ್ತನೆಯಾಗಿರುತ್ತದೆ. ಹೆಸರು, ಶೇಂಗಾ, ಸೊಯಾಬಿನ್ ಸೇರಿದಂತೆ ವಿವಿಧ ಬೆಳಗಳನ್ನು ಬಿತ್ತನೆ



ಮಾಡಲಾಗಿದೆ. ಬಿತ್ತನೆ ಬೀಜಗಳನ್ನು ಶೇಖರಣೆ ಮಾಡಿ ಇಡಲಾಗಿದೆ. ಬರಗಾಲ ಪ್ರದೇಶಗಳನ್ನು ಸರ್ಕಾರ ಘೋಷಣೆ ಮಾಡಲಿದೆ ಎಂದು ಸಹಾಯಕ ಕೃಷಿ ನಿರ್ದೇಶಕರಾದ ರಾಜಶೇಖರ ಅಣಗೌಡರ ಸಭೆಗೆ ತಿಳಿಸಿದರು.

ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 21 ವಸತಿ ನಿಲಯಗಳಿದ್ದು, ಅದರಲ್ಲಿ 12 ಮೆಟ್ರಿಕ್ ನಂತರದ ವಸತಿ ನಿಲಯಗಳು ಹಾಗೂ 9 ಮೆಟ್ರಿಕ್ ಪೂರ್ವ ವಸತಿ ನಿಲಯಗಳಿವೆ. ವಸತಿ ನಿಲಯಗಳಲ್ಲಿ ಗ್ರಂಥಾಲಯ, ರುಚಿಯಾದ ಊಟ ಮತ್ತು ಮಕ್ಕಳಿಗೆ ಅವಶ್ಯಕ ಕಿಟ್‌ಗಳನ್ನು ನೀಡಲಾಗುತ್ತಿದೆ. ಮಕ್ಕಳ ಬಗ್ಗೆ ಕಾಳಜಿ ವಹಿಸಲಾಗುತ್ತಿದೆ ಎಂದು ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಾದ ಸಿ.ವಿ. ಕರವೀರಮಠ ಮಾಹಿತಿ ನೀಡಿದರು.

ಗ್ರಾಮ ಪಂಚಾಯತ ಕಟ್ಟಡ, ಅಂಗನವಾಡಿ ಕಟ್ಟಡ, ಶೌಚಾಲಯ ನಿರ್ಮಾಣ ಮತ್ತು ದುರಸ್ತಿ, ಗ್ರಾಮೀಣ ರಸ್ತೆ ಮತ್ತು ಸೇತುವೆ ನಿರ್ಮಾಣ ಕಾಮಗಾರಿಗಳನ್ನು ಶೀಘ್ರಗತಿಯಲ್ಲಿ ಮುಕ್ತಾಯಗೊಳಿಸಬೇಕು ಎಂದು ಪಂಚಾಯತ ರಾಜ್ ಇಲಾಖೆಯ ಅಧಿಕಾರಿಗಳಿಗೆ ದೀಪಕ ಮಡಿವಾಳರ ಸೂಚಿಸಿದರು.

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಹೊಸ ಪ್ರದೇಶ ವಿಸ್ತರಣೆ, ನಿರ್ವಹಣೆ ಪ್ಯಾಕ್ ಹೌಸ್, ಸಮುದಾಯ ಕೃಷಿ ಹೊಂಡ, ವೈಯಕ್ತಿಕ ಕೃಷಿಹೊಂಡ, ಈರುಳ್ಳಿ ಶೇಖರಣಾ ಘಟಕ ಸೇರಿದಂತೆ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಬಹುದು. ಅನುದಾನ ಬಿಡುಗಡೆಯಾದ ನಂತರ ಕಾಮಗಾರಿಗಳನ್ನು ಆರಂಭಿಸಲಾಗುತ್ತದೆ. ತರಕಾರಿ, ಹೂವು ಬೆಳೆಗಳಿಗೆ ಸಬ್ಸಿಡಿ ನೀಡಲಾಗುವುದು ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಪ್ರಭುಲಿಂಗ ಗಡ್ಡದ ಮಾಹಿತಿ ಒದಗಿಸಿದರು.

ಸಾರ್ವಜನಿಕರಿಗೆ ವಿವಿಧ ಸಸಿಗಳನ್ನು ರಿಯಾಯಿತಿ ದರದಲ್ಲಿ ವಿತರಣೆ ಮಾಡಲಾಗುತ್ತಿದೆ. 2 ಲಕ್ಷಕ್ಕೂ ಅಧಿಕ ಸಸಿಗಳನ್ನು ವಿತರಣೆ ಮಾಡಲು ಯೋಜನೆ ಹಾಕಿಕೊಳ್ಳಲಾಗಿದೆ. ಸಾರ್ವಜನಿಕರು ಇದರ ಉಪಯೋಗವನ್ನು ಪಡೆದುಕೊಳ್ಳಬಹುದಾಗಿದೆ. ಕರಿಬೇವು, ಬೇವು, ಸಾಗವಾನಿ, ಲಿಂಬೆ, ಸೀತಾಫಲ, ಮಹಾಗನಿ ಸಸಿಗಳನ್ನು ರಸ್ತೆಯ ಪಕ್ಕದಲ್ಲಿ ನೆಡಲಾಗುತ್ತಿದ್ದು, ಅವುಗಳ ನಿರ್ವಹಣೆಗೆ ಒಬ್ಬರನ್ನು ನೇಮಿಸಲಾಗುವುದು. ಬುಡ್ನಾಳ, ಚನ್ನಾಪೂರ, ರಾಯನಾಳ, ಕುಸುಗಲ್ ರಸ್ತೆ, ಅಣ್ಣಿಗೇರಿ ನಗರಗಳಲ್ಲಿ ನೆಡುತೋಪು ನಿರ್ಮಾಣ ಮಾಡಲಾಗಿರುತ್ತದೆ ಎಂದು ಸಾಮಾಜಿಕ ಅರಣ್ಯ ವಲಯದ ವಲಯ ಅರಣ್ಯ ಅಧಿಕಾರಿ ಅರವಿಂದ ಕಣವಿ ಹಾಗೂ ಪ್ರಾದೇಶಿಕ ವಲಯದ ವಲಯ ಅರಣ್ಯ ಅಧಿಕಾರಿಗಳಾದ ಎನ್.ಎಸ್.ಉಪ್ಪಾರ ಸಭೆಗೆ ತಿಳಿಸಿದರು.

ಈಗಾಗಲೇ 146 ಅಂಗನವಾಡಿ ಕೇಂದ್ರಗಳಿದ್ದು, ಮಾರ್ಚ್ ತಿಂಗಳಲ್ಲಿ 9 ಹೊಸ ಅಂಗನವಾಡಿ ಕೇಂದ್ರ ಆರಂಭವಾಗಿದೆ. ಏಪ್ರಿಲ್ ತಿಂಗಳಲ್ಲಿ 12 ವಿಪರೀತ ಕಡಿಮೆ ತೂಕದ ಮಕ್ಕಳಿದ್ದರು. ಆಗಸ್ಟ್ ಕೊನೆಯಲ್ಲಿ 3 ಮಕ್ಕಳು ಮಾತ್ರ ಇರುವರು. ಏಪ್ರಿಲ್ ತಿಂಗಳಲ್ಲಿ 173 ಸಾಧಾರಣಾ ಕಡಿಮೆ ತೂಕದ ಮಕ್ಕಳಿದ್ದು, ಅದರಲ್ಲಿ 105 ಮಕ್ಕಳು ಆಗಸ್ಟ್ ಅಂತ್ಯಕ್ಕೆ ಇರುವರು. ಅಮೃತ ಯೋಜನೆಯಡಿ ಸ್ತ್ರೀ ಶಕ್ತಿ ಸಂಘಗಳಿಗೆ ಧನ ಸಹಾಯ ನೀಡಲಾಗಿದೆ ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ದೀಪಾ ಜಾವೂರ ತಿಳಿಸಿದರು.

ಹೆಸ್ಕಾಂ, ಸಮಾಜ ಕಲ್ಯಾಣ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಸಭೆಗೆ ವರದಿ ಒಪ್ಪಿಸಿದರು.

ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಸಿ.ಆರ್. ಅಂಬಿಗೇರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆಯ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರಾದ ಜಗದೀಶ ಪಾಟೀಲ, ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ವಿವಿಧ ಗ್ರಾಮ ಪಂಚಾಯತಗಳ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು, ಇತರರು ಉಪಸ್ಥಿತರಿದ್ದರು.

# ಸಂಶೋಧನಾ ಯೋಜನಾ ಕಾರ್ಯದ ಅನುದಾನಕ್ಕೆ ಆಯ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಕೆಎಲ್‌ಇ ಸಂಸ್ಥೆಯ ಕಾಲೇಜ್ ಆಫ್ ಫಾರ್ಮಸಿ ಮಹಾವಿದ್ಯಾಲಯದ ಬ್ಯಾಚುಲರ್ ಆಫ್ ಫಾರ್ಮಸಿಯ 4ನೇ ಸೆಮಿಸ್ಟರ್ ವಿದ್ಯಾರ್ಥಿನಿಯರಾದ ಕಾವ್ಯ ಕಲ್ಲಪ್ಪನವರ ಹಾಗೂ ಗೌರಿ ಚಿನ್ನಯ್ಯನಮಠ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ಮಹಾವಿದ್ಯಾಲಯ (ಆರ್‌ಜಿಯುಹೆಚ್‌ಎಸ್)ದ ಸಂಶೋಧನಾ ಕಾರ್ಯದ ಅನುದಾನಕ್ಕೆ ಆಯ್ಕೆಯಾಗಿದ್ದಾರೆ.

ಆರ್‌ಜಿಯುಹೆಚ್‌ಎಸ್ ಈ ವಿದ್ಯಾರ್ಥಿನಿಯರಿಗೆ ತಲಾ 15 ಸಾವಿರ ರೂಪಾಯಿಗಳ ಸಂಶೋಧನಾ ಯೋಜನಾ ಧನವನ್ನು ನೀಡಿ ಪ್ರೋತ್ಸಾಹಿಸಿದೆ. ಕಾವ್ಯ-ಡಾಕ್ಕಿಂಗ್, ಸಿಂಥೆಸಿಸ್ ಆ್ಯಂಡ್ ಬಯಲಾಜಿಕಲ್ ಇನ್ವೆಸ್ಟಿಗೇಷನ್ ಆಫ್ ಕ್ವಿನೋಲಿನ್ ಡೆರಿವೇಟಿವ್ಸ್ ಹಾಗೂ ಗೌರಿ -ಇಂಟಲಿಜೆಂಟ್ ಡೆಂಟ್ರಿಮರ್ಸ್ ಫಾರ್ ಟ್ಯೂಮರ್ ಮೈಕ್ರೋರ್ನ್ವಿರಾನ್ಮೆಂಟ್ ರೆಸ್ಪಾನ್ಸಿವ್ ಡ್ರಗ್ ಡೆಲಿವರಿ ಈ ವಿಷಯಗಳ ಮೇಲೆ ಯೋಜನಾ ಕಾರ್ಯವನ್ನು ಪ್ರಾರಂಭಿಸಲಿದ್ದಾರೆ. ಡಾ. ರಮೇಶ್ ವ್ಹಿ ಹಾಗೂ ಪ್ರಮೋದ್ ಎನ್. ಈ ಯೋಜನಾ ಕಾರ್ಯದ ಮಾರ್ಗದರ್ಶಕರಾಗಿದ್ದಾರೆ.

ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ರಮೇಶ್ ವ್ಹಿ., ಈ ಯೋಜನಾ ಕಾರ್ಯವನ್ನು ಯಶಸ್ವಿಯಾಗಿ ಪೂರೈಸಿ ಮಹಾವಿದ್ಯಾಲಯದ ಹಾಗೂ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ಮಹಾವಿದ್ಯಾಯದ ಕೀರ್ತಿಯನ್ನು ಹೆಚ್ಚಿಸಬೇಕೆಂದು ವಿದ್ಯಾರ್ಥಿನಿಯರಿಗೆ ಶುಭ ಕೋರಿದರು. ಯೋಜನಾ ಕಾರ್ಯದ ಮಾರ್ಗದರ್ಶಕರು, ಮಹಾವಿದ್ಯಾಲಯದ ಬೋಧಕ ಮತ್ತು





ಬೋಧಕೇತರ ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಹಾಗೂ ಕೆಎಲ್‌ಇ ಪರಿವಾರವು ವಿದ್ಯಾರ್ಥಿನಿಯರ ಸಾಧನೆಗೆ ಸಂತಸ ವ್ಯಕ್ತಪಡಿಸಿ ಶುಭ ಹಾರೈಸಿದ್ದಾರೆ.

**ನೀವೂ ನಮ್ಮ ಜೊತೆ ಕೈಜೋಡಿಸಿ**

**'ವಿಜಯಸಾಕ್ಷಿ'**

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545

## 'ಪಶು ಸಂಜೀವಿನಿ' ಆಂಬ್ಯುಲೆನ್ಸ್ ಸದುಪಯೋಗಪಡಿಸಿಕೊಳ್ಳಿ

▸▸ಮೊದಲನೇ ಪುಟದಿಂದ

ಈ ಯೋಜನೆಯನ್ನು ಯಶಸ್ವಿಗೊಳಿಸಬೇಕು. ಇದನ್ನು ತಾಲೂಕಾ ಮಟ್ಟದಲ್ಲಿ ಸಮರ್ಪಕವಾಗಿ ನಿರ್ವಹಣೆ ಮಾಡುವಂತೆ ಅಧಿಕಾರಿಗಳಿಗೆ ಈಗಾಗಲೇ ಸೂಚಿಸಿದ್ದೇನೆ. ರೈತರ ಜಾನುವಾರುಗಳಿಗೆ ವೈದ್ಯರ ಕೊರತೆಯನ್ನು ನೀಗಿಸಿ ಈ ಯೋಜನೆ ಸಂಜೀವಿನಿಯಾಗಲಿದೆ ಎಂದರು.

ತಹಸೀಲ್ದಾರ ಅನಿಲ ಬಡಿಗೇರ, ತಾ.ಪಂ ಇಓ ಡಾ. ಎನ್.ಎಚ್ ಓಲೇಕಾರ, ಸಿ.ಸಿ ನೂರಶೆಟ್ಟರ, ಫಕ್ಕೀರೇಶ ರಟ್ಟಿಹಳ್ಳಿ, ಗೂಳಪ್ಪ ಕರಿಗಾರ, ಬಸವರಾಜ ಚಿಕ್ಕತೆ-ೂಟದ, ತಿಪ್ಪಣ್ಣ ಕೊಂಚಿಗೇರಿ ಮುಂತಾದವರು ಉಪಸ್ಥಿತರಿದ್ದರು.

## ಬೇರೆ ಧರ್ಮ ಇದ್ದಿದ್ದರೆ ನೀವು ಮಂತ್ರಿಯಾಗುತ್ತಿರಲಿಲ್ಲ

▸▸ಮೊದಲನೇ ಪುಟದಿಂದ

ಧರ್ಮದಲ್ಲಿಯೇ ಹುಟ್ಟಿದ್ದು. ಹೀಗಾಗಿ ನೀವು ಕೂಡ ಸನಾತನ ಧರ್ಮದಲ್ಲಿಯೇ ಹುಟ್ಟಿದ್ದೀರಿ. ನೀವೇನು ಪಾಕಿಸ್ತಾನ, ಅಫ್ಘಾನಿಸ್ತಾನ, ಚೀನಾದಲ್ಲಿ ಹುಟ್ಟಿಲ್ಲ. ಹಿಂದೂಸ್ಥಾನದಲ್ಲಿ ಹುಟ್ಟಿದವರೆಲ್ಲರೂ ಹಿಂದೂಗಳೇ ಆಗುತ್ತಾರೆ. ನೀವೇನೇ ಹೇಳಿದರೂ ಸನಾತನ ಧರ್ಮವೆನ್ನುವುದು ಇದ್ದೇ ಇರುತ್ತದೆ. ನಿಮ್ಮ ನಟನೆಗೆ ಸೆಲ್ಯೂಟ್ ಹೊಡೆಯುತ್ತೇವೆ. ಆದರೆ, ಎಲ್ಲದರಲ್ಲೂ ಮೂಗು ತೂರಿಸುವ ಪ್ರಯತ್ನ ಸರಿಯಲ್ಲ. ಹಿಂದೂ ಧರ್ಮವನ್ನು ಟೀಕಿಸಿ, ಅವಮಾನ ಮಾಡುವುದು ನಿಮಗೆ ಶೋಭೆ ತರುವ ಕೆಲಸವಲ್ಲ ಎಂದು ನಟ ಪ್ರಕಾಶ್ ರಾಜ್‌ಗೆ ತಿವಿದರು.

ಈ ಸಂದರ್ಭದಲ್ಲಿ ಶ್ರೀರಾಮಸೇನಾ ಸಂಘಟನೆಯ ಉತ್ತರ ಕರ್ನಾಟಕ ಮುಖಂಡ ರಾಜು ಖಾನಪ್ಪನವರ್ ಸೇರಿದಂತೆ ಕಾರ್ಯಕರ್ತರು ಹಾಜರಿದ್ದರು.

### ಕರ್ನಾಟಕ ಪಬ್ಲಿಕ್ ಸ್ಕೂಲ್‌ನ ನೂತನ ಕೊಠಡಿಗಳನ್ನು ಲೋಕಾರ್ಪಣೆಗೊಳಿಸಿದ ಸಚಿವ ಆರ್.ಬಿ ತಿಮ್ಮಾಪೂರ

# ಹೊರಟ್ಟಿಯವರಂತಹ ಜನಪ್ರತಿನಿಧಿಗಳ ಅಗತ್ಯತೆಯಿದೆ

■ವಿಜಯಸಾಕ್ಷಿ ಸುದ್ದಿ, ಗದಗ

ದೇಶದ ಇತಿಹಾಸದಲ್ಲಿಯೇ ಅತ್ಯಂತ ಹಿರಿಯ ವಿಧಾನ ಪರಿಷತ್ ಸದಸ್ಯರೆಂಬ ಕೀರ್ತಿಗೆ ಪಾತ್ರರಾದ ಸಭಾಪತಿ ಬಸವರಾಜ ಹೊರಟ್ಟಿಯವರು ಮುಧೋಳ ತಾಲೂಕಿಗೆ ನೀಡಿದ ಕೊಡುಗೆ ಹಾಗೂ ವಿಶೇಷವಾಗಿ ಹುಟ್ಟೂರಿನ ಯಡಹಳ್ಳಿಯಲ್ಲಿ ದೇಶದಲ್ಲಿಯೇ ಮಾದರಿಯಾದ ಸರಕಾರಿ ಶಾಲೆಯನ್ನು ಕಟ್ಟುವ ಮೂಲಕ ಈ ಭಾಗದ ಲಕ್ಷಾಂತರ ಗ್ರಾಮೀಣ ವಿದ್ಯಾರ್ಥಿಗಳ ಬಾಳಿಗೆ ಬೆಳಕಾಗಿದ್ದಾರೆ ಎಂದು ಅಬಕಾರಿ ಸಚಿವ ಆರ್.ಬಿ ತಿಮ್ಮಾಪುರ್ ಹೇಳಿದರು.

ಅವರು ಬವರಾಜ್ ಹೊರಟ್ಟಿಯವರ ಹುಟ್ಟೂರಾದ ಯಡಹಳ್ಳಿಯಲ್ಲಿ ಶಿವಲಿಂಗಪ್ಪ ಬಸಪ್ಪ ಹೊರಟ್ಟಿ ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ನಿರ್ಮಾಣಗೊಂಡ ನೂತನ ಕೊಠಡಿಗಳನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು.

ಯಡಹಳ್ಳಿಯಲ್ಲಿ ನಿರ್ಮಾಣಗೊಂಡ ಶಾಲೆ 'ಹೈಟೆಕ್ ಶಾಲೆ' ಎಂದೇ ಪ್ರಸಿದ್ಧಿ ಹೊಂದಿದೆ. ಕೋಟ್ಯಾಂತರ ರೂ. ಬೆಲೆಬಾಳುವ 7 ಎಕರೆ ಜಮೀನನ್ನ ಸರಕಾರಿ ಶಾಲೆಗೆ ನೀಡಿ, 30 ಕೋಟಿಗೂ ಹೆಚ್ಚು ಹಣ ವ್ಯಯಿಸಿದ್ದಾರೆ. ಯಡಹಳ್ಳಿಗೆ ಮಹಿಳಾ ಮಹಾವಿದ್ಯಾಲಯ, ಐಟಿಐ ಕಾಲೇಜು, ಪ್ರಾಥಮಿಕ ಆರೋಗ್ಯ ಕೇಂದ್ರ, ಗ್ರಂಥಾಲಯ, ಬಾಲಕ ಮತ್ತು ಬಾಲಕಿಯರ ವಸತಿ ನಿಲಯ ಹೀಗೆ ಹತ್ತಾರು ಕೆಲಸಗಳನ್ನು ತಮ್ಮೂರಿಗೆ ಕಲ್ಪಿಸಿಕೊಟ್ಟಿದ್ದಾರೆ. ಇಂತಹ ಜನಪ್ರತಿನಿಧಿಗಳ ಅಗತ್ಯ ಹೆಚ್ಚಿದೆ ಎಂದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಬಸವರಾಜ್ ಹೊರಟ್ಟಿ, ನಮ್ಮ ತಂದೆಯವರ ಕನಸಿನ ಶಾಲೆ ಇದಾಗಿದೆ. ಇದರ ಸದುಪಯೋಗವನ್ನು ಈ ಭಾಗದ ಪ್ರತಿಯೊಬ್ಬ ವಿದ್ಯಾರ್ಥಿಯೂ ಪಡೆಯಬೇಕು. ಕಳೆದ ನಾಲ್ಕು ದಶಕಗಳಿಂದ ಸಾರ್ವಜನಿಕ ಸೇವೆ ಮಾಡಲು ನನಗೆ ಸ್ಫೂರ್ತಿಯೇ ನನ್ನ ಹೆತ್ತ ತಂದೆ-ತಾಯಿಗಳು. ವಿದ್ಯಾರ್ಥಿಗಳು ಸಹ ತಮ್ಮ ಹೆತ್ತವರನ್ನು ಎಂದಿಗೂ ನಿರ್ಲಕ್ಷಿಸಬೇಡಿ ಎಂದರು.

ಈ ಶಾಲೆಯಿಂದಾಗಿ ಯಡಹಳ್ಳಿ ಗ್ರಾಮದತ್ತ ಸಾರ್ವಜನಿಕ ಶಿಕ್ಷಣ ಇಲಾಖೆ, ಜನಪ್ರತಿನಿಧಿಗಳು ನೋಡುವಂತಾಗಿದೆ. ಈ ಶಾಲೆಗೆ ಈಗಾಗಲೇ ರಾಷ್ಟ್ರ ಪ್ರಶಸ್ತಿ, ರಾಜ್ಯ ಪ್ರಶಸ್ತಿಗಳು ಅರಸಿ ಬಂದಿವೆ. ಅದಕ್ಕೆಲ್ಲ ಇಲ್ಲಿಯ ಶಿಕ್ಷಕ ವೃಂದದವರ ಸೇವೆಯೇ ಕಾರಣ. ಅವರಿಗೂ ನಾನು ಶಿಕ್ಷಕರ ದಿನಾಚರಣೆಯ ಶುಭ ದಿನದಂದು ಹೃದಯಪೂರ್ವಕವಾಗಿ ಶುಭಾಶಯಗಳನ್ನು ಕೋರುತ್ತೇನೆ ಎಂದರು.

> ಇಂದಿಗೂ ನಾನು ನನ್ನ ಬಾಲ್ಯದ ಸ್ನೇಹಿತರನ್ನ ಮರೆತಿಲ್ಲ. ಸ್ಥಾನಮಾನಗಳು ಮುಖ್ಯವಲ್ಲ. ನಮಗೆ ಮಾನವೀಯ ಸಂಬಂಧಗಳು ಮುಖ್ಯ ಎಂಬ ಹಿನ್ನೆಲೆಯಲ್ಲಿ ನಾನು ಬೆಳೆದು ಬಂದವನು. ದೇಶದಲ್ಲಿಯೇ ಮಾದರಿಯಾದ ಈ ಶಾಲೆಯನ್ನು, ತಮ್ಮ ಮನೆಯನ್ನು ಜೋಪಾನ ಮಾಡಿಕೊಂಡಂತೆ ಈ ಊರಿನ ಜನ ಈ ಶಾಲೆಯನ್ನು ಶುಚಿಯಾಗಿಟ್ಟುಕೊಂಡು, ಜತನದಿಂದ ಕಾಪಾಡಿಕೊಂಡು 'ನಮ್ಮ ಶಾಲೆ ನಮ್ಮೂರಿನ ಶಾಲೆ ನಮ್ಮೆಲ್ಲರ ಶಾಲೆ' ಎಂಬ ಭಾವನೆಯಿಂದ ನೋಡಿಕೊಂಡು ಹೋಗಬೇಕಿದೆ.
> **- ಬಸವರಾಜ್ ಹೊರಟ್ಟಿ.** ಸಭಾಪತಿಗಳು.

ಇದೇ ಸಂದರ್ಭದಲ್ಲಿ ಬಸವರಾಜ್ ಹೊರಟ್ಟಿ ಗಣಿತ ಪ್ರಯೋಗಾಲಯ ಹಾಗೂ ಮಿನಿ ತರಬೇತಿ ಕೇಂದ್ರಕ್ಕೆ ಧಾರವಾಡದ ಪ್ರಾದೇಶಿಕ ವಿಜ್ಞಾನ ಕೇಂದ್ರದ ನಿರ್ದೇಶಕ ಡಾ. ವೀರಣ್ಣ ಬೋಳಶೆಟ್ಟಿಯವರ ನೇತೃತ್ವದಲ್ಲಿ ತಯಾರಾದ 25ಕ್ಕೂ ಹೆಚ್ಚು ಗಣಿತ ಮಾದರಿಗಳನ್ನು ಅವ್ವ ಸೇವಾ ಟ್ರಸ್ಟ್ ಪರವಾಗಿ ನೀಡಲಾಯಿತು.

ಈ ಸಂದರ್ಭದಲ್ಲಿ ಪ್ರಾ. ಜಯಲಕ್ಷ್ಮೀ ಪೆಟ್ಲೂರ, ಉಪ ಪ್ರಾಚಾರ್ಯ ಎಸ್.ಬಿ ಹಿರೇಮಠ, ಗಿರೀಶ ಲಕ್ಷಾಣಿ ಸೇರಿದಂತೆ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳು, ಎಸ್‌ಡಿಎಂಸಿ ಪದಾಧಿಕಾರಿಗಳು, ಶಾಲೆಯ ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ನಾಗರಿಕ ಸಮಾಜ ತಲೆ ತಗ್ಗಿಸುವ ಹೇಯ ಕೃತ್ಯ

▸▸ಮೊದಲನೇ ಪುಟದಿಂದ

ಮಾಡಿಕೊಂಡು ಅಸಹಾಯಕ ಮಹಿಳೆಯರು, ಬಾಲಕಿಯರ ಮೇಲೆ ನಿರಂತರ ಅತ್ಯಾಚಾರ, ದೌರ್ಜನ್ಯವೆಸಗುತ್ತಿದ್ದಾರೆಂದು ಆರೋಪಿಸಿದರು.

ಸರಕಾರ ಈ ಪ್ರಕರಣದ ಬಗ್ಗೆ ಸಮಗ್ರ ತನಿಖೆ ನಡೆಸಬೇಕು. ಸಂತ್ರಸ್ಥೆ ಅತ್ಯಂತ ಬಡ ಕುಟುಂಬಕ್ಕೆ ಸೇರಿದ್ದಾಳೆ. ಈ ಕುಟುಂಬದ ಸದಸ್ಯರ ಬಡತನವನ್ನೇ ಬಂಡವಾಳ ಮಾಡಿಕೊಂಡಿರುವ ಕೆಲ ದುಷ್ಕರ್ಮಿಗಳು ಸಂತ್ರಸ್ಥೆಯ ತಾಯಿಗೆ ಬೆದರಿಕೆ ಹಾಕಿ ಪ್ರಕರಣ ವಾಪಸ್ ಪಡೆಯುವಂತೆ ಒತ್ತಾಯಿಸುತ್ತಿದ್ದಾರೆ. ಯಾವದೇ ಸಂದರ್ಭದಲ್ಲಿ ಸಂತ್ರಸ್ಥೆಯ ತಾಯಿಗೆ ಏನೇ ಆದರೂ ಅದಕ್ಕೆ ಪೊಲೀಸ್ ಇಲಾಖೆಯೇ ಸಂಪೂರ್ಣವಾಗಿ ಜವಾಬ್ದಾರಿಯಾಗುತ್ತದೆ. ಪೊಲೀಸರು ಕೂಡಲೇ ಸಂತ್ರಸ್ಥೆಯ ತಾಯಿಗೆ ಸೂಕ್ತ ರಕ್ಷಣೆ ನೀಡುವಂತೆ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಶ್ರೀರಾಮ ಸೇನೆಯ ರಾಜ್ಯ ಕಾರ್ಯದರ್ಶಿ ರಾಜೂ ಖಾನಪ್ಪನವರ, ಜಿಲ್ಲಾ ಸಂಚಾಲಕ ಸೋಮು ಗುಡಿ, ರಾಜ್ಯ ಕಾರ್ಯಕಾರಿ ಸದಸ್ಯ ಮಹೇಶ ರೋಖಡೆ, ಕಿರಣ ಹಿರೇಮಠ, ಮೌನೇಶ ದಾಸರ, ಶಶಿಕಾಂತ ಗಟ್ಟಿ, ಮಂಜುನಾಥ ಪೂಜಾರ, ಸುನೀಲ ಕಬಾಡಿ, ಈಶ್ವರ ಕಾಟವಾ, ಈರಣ್ಣ ಗಾಣಿಗೇರ, ಗುರುರಾಜ ಶಿಂಧೆ, ವಿರೇಶ ಬೀರಲದಿನ್ನಿ, ಅಶೋಕ ಭಜಂತ್ರಿ, ಶರಣು ಗಾಣಿಗೇರ, ಅನಿಲ ಮುಳ್ಳಾಳ, ಪ್ರದೀಪ್ ಭೋಸ್ಲೇ, ಚೇತನ ಅಬ್ಬಿಗೇರಿ ಮುಂತಾದವರಿದ್ದರು. ಮನವಿ ಸ್ವೀಕರಿಸಿದ ಜಿಲ್ಲಾ ಪೊಲೀಸ್ ವರೀಷ್ಠಾಧಿಕಾರಿ ಬಿ.ಎಸ್ ನೇಮಗೌಡ ಸೂಕ್ತ ಕ್ರಮ ಕೈಗೊಳ್ಳುವದಾಗಿ ಭರವಸೆ ನೀಡಿದರು.

### ಪೊಲೀಸರು ಸಮಗ್ರ ತನಿಖೆ ನಡೆಸಲಿ

ಬಿಂಕದಕಟ್ಟಿ ಗ್ರಾಮದಲ್ಲಿ ಯುವಕನಿಂದ ಅತ್ಯಾಚಾರಕ್ಕೊಳಗಾಗಿರುವ ಅಪ್ರಾಪ್ತ ಬುದ್ಧಿಮಾಂದ್ಯ ಬಾಲಕಿಯ ಕುಟುಂಬಕ್ಕೆ ನ್ಯಾಯ ಒದಗಿಸಬೇಕು. ಅತ್ಯಾಚಾರಗೈದಿರುವ ಆರೋಪಿಯನ್ನು ಬಾಲಮಂದಿರದಿಂದ ಸ್ಥಳಾಂತರಿಸಿ ಪೋಕ್ಸೋ ಪ್ರಕರಣ ದಾಖಲಿಸಿ ಜೈಲಿಗೆ ಕಳಿಸಬೇಕು. ಪೊಲೀಸ್ ಇಲಾಖೆ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು. ಒಂದು ವೇಳೆ ಪೊಲೀಸ್ ಇಲಾಖೆ ಅತ್ಯಾಚಾರಿ ಯುವಕ ಮುಸ್ಲಿಂ ಧರ್ಮಕ್ಕೆ ಸೇರಿದವನೆಂಬ ಏಕೈಕ ಕಾರಣದಿಂದ ಪ್ರಕರಣ ಮುಚ್ಚಿ ಹಾಕಲು ಪ್ರಯತ್ನಿಸಿದಲ್ಲಿ ಶ್ರೀರಾಮ ಸೇನೆ ಸಂಘಟನೆಯಿಂದ ರಾಜ್ಯಾದ್ಯಂತ ಉಗ್ರ ಹೋರಾಟ ಕೈಗೊಳ್ಳಲಾಗುವುದೆಂದು ಮುತಾಲಿಕ್ ಎಚ್ಚರಿಸಿದರು.

## ಅರುಣೋದಯ ಶಾಲೆಯಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ

■ವಿಜಯಸಾಕ್ಷಿ ಸುದ್ದಿ, ಗದಗ

ಗದುಗಿನ ಸೇವಾ ಭಾರತಿ ಟ್ರಸ್ಟ್‌ನ ಅರುಣೋದಯ ವಿಶೇಷ ಅಗತ್ಯವುಳ್ಳ ಮಕ್ಕಳ ಶಾಲೆಯಲ್ಲಿ ಬುಧವಾರ ಶ್ರೀಕೃಷ್ಣ ಜನ್ಮಾಷ್ಟಮಿಯನ್ನು ಆಚರಿಸಲಾಯಿತು. ಶಾಲೆಯ ವಿಶೇಷ ಚೇತನ ಮುದ್ದು ಮಕ್ಕಳು ಬಾಲ ಕೃಷ್ಣನ ವೇಷ-ಭೂಷಣದಲ್ಲಿ ಆಗಮಿಸಿ, ಕಣ್ಮನ ಸೆಳೆದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಲಾ ಆಡಳಿತ ಮಂಡಳಿಯ ಉಪಾಧ್ಯಕ್ಷ ಲುಕ್ಕಣಸಾ ರಾಜೋಳಿ, ಸನಾತನ ಧರ್ಮದ ಸಂಸ್ಥಾಪಕ ಶ್ರೀಕೃಷ್ಣ ಪರಮಾತ್ಮನ ಜನ್ಮದಿನಾಚರಣೆಯನ್ನು ಪ್ರಪಂಚದಾದ್ಯಂತ ಶ್ರದ್ಧಾ ಭಕ್ತಿಯೊಂದಿಗೆ, ಸಂಭ್ರಮ ಸಡಗರದೊಂದಿಗೆ ಆಚರಿಸಲಾಗುತ್ತಿದೆ.



ಧರ್ಮ ಪಾಲನೆಯೊಂದಿಗೆ ಧರ್ಮದ ಹಾದಿಯಲ್ಲಿ ಮುನ್ನಡೆಯಲು ಗೀತೋಪದೇಶಗಳ ಮೂಲಕ ಶ್ರೀಕೃಷ್ಣ ಪರಮಾತ್ಮನು ಸಂದೇಶ ಸಾರಿದ್ದು, ಅವುಗಳನ್ನು ಪರಿಪಾಲಿಸುವ ಮೂಲಕ ನಾವೆಲ್ಲರೂ ಸನ್ಮಾರ್ಗದೆಡೆಗೆ ಸಾಗಬೇಕಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಅಮರ ಓರಾ, ನಂದಾ ಓರಾ, ಪ್ರಣವ ಓರಾ, ಲಕಾರಾಮ, ಶಾಲಾ ಮುಖ್ಯೋಪಾಧ್ಯಾಯ ಮಲ್ಲಪ್ಪ ಹಕ್ಕಿ, ಶಿಕ್ಷಕರಾದ ಜಗದೀಶ ಹಡಪದ, ಜಯಶ್ರೀ ಭಾವರೆ, ರೇಣುಕಾ ದಾಸರ, ವೀಣಾ ಕೊಲ್ಲಾಪುರೆ, ಸಿಬ್ಬಂದಿ ಮಲ್ಲಿಕಾರ್ಜುನ ನಾಗಲಾಪೂರ ಮುಂತಾದವರಿದ್ದರು.

## ಶ್ರೀ ಸಾಯಿಬಾಬಾ ಮಂದಿರದಲ್ಲಿ ಅನ್ನಸಂತರ್ಪಣೆ ಇಂದು

■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಹಳೇ ಸರಾಫ ಬಜಾರದ ಕರೂಗಲ್ ಓಣಿಯಲ್ಲಿರುವ ಶ್ರೀ ಶಿರಡಿ ಸಾಯಿಬಾಬಾ ದೇವಸ್ಥಾನದಲ್ಲಿ ಶ್ರೀ ಸಾಯಿಸೇವಾ ಸಮಿತಿ ವತಿಯಿಂದ ಗುರುವಾರ ಶ್ರಾವಣ ಮಾಸದ ನಿಮಿತ್ತ ಮಹಾ ಅನ್ನ ಸಂತರ್ಪಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಮುಂಜಾನೆ ಕಾಕಡಾರತಿ, ಧೂಪಾರತಿ, ಮಹಾಮಂಗಳ ಸ್ನಾನ ಹಾಗೂ ಅನ್ನ ಸಂತರ್ಪಣೆ ಕಾರ್ಯಕ್ರಮ ಜರುಗಲಿದೆ. ಸದ್ಭಕ್ತರು ಪಾಲ್ಗೊಂಡು ಶ್ರೀ ಶಿರಡಿ ಸಾಯಿಬಾಬಾರವರ ಕೃಪಾಶೀರ್ವಾದಕ್ಕೆ ಪಾತ್ರರಾಗಬೇಕೆಂದು ಸಮಿತಿಯ ಪ್ರಕಟಣೆ ತಿಳಿಸಿದೆ.



## ವಿದ್ಯೆ ಕದಿಯಲಾಗದ ಸಂಪತ್ತು: ಗುರುಪಾದ ಕಟ್ಟಿಮನಿ




■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಬಾಲ ವಿನಾಯಕ ವಿದ್ಯಾನಿಕೇತನ ಶಾಲೆಯಲ್ಲಿ ಶಿಕ್ಷಕರ ದಿನಾಚರಣೆ ಆಚರಿಸಲಾಯಿತು. ಶಾಲೆಯ ಪ್ರಾಚಾರ್ಯ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ, ಶಿಕ್ಷಕರ ದಿನಾಚರಣೆಯ ಶುಭಾಶಯ ಕೋರಿದರು.

ಲೊಯೊಲಾ ಹೈಸ್ಕೂಲಿನ ನಿವೃತ್ತ ಕನ್ನಡ ಸಹ ಶಿಕ್ಷಕ ಗುರುಪಾದ ಕಟ್ಟಿಮನಿ ಮಾತನಾಡಿ, ಬೇಧ- ಭಾವವಿಲ್ಲದೆ ಎಲ್ಲರೂ ಸೇರಿ ಆಚರಿಸುವ ಹಬ್ಬವೇ ಶಿಕ್ಷಕರ ದಿನಾಚರಣೆ. ಶಿಕ್ಷಕರು ಕಲಿಸುವ ಪಾಠಗಳನ್ನು ಅಚ್ಚುಕಟ್ಟಾಗಿ ಕಲಿಯಿರಿ. ವಿದ್ಯೆ ಕಲಿಯಲಾಗದ ಸಂಪತ್ತು ಎಂದರು.

ಕಾರ್ಯಕ್ರಮದಲ್ಲಿ ಕಾರ್ಯದರ್ಶಿ ಎಸ್. ರವಿ, ನಿರ್ದೇಶಕ ವಿನಾಯಕ ಆರ್, ಪ್ಲೇ ಹೋಮ್ ಮುಖ್ಯಸ್ಥೆ ಗಂಗಾ, ಇಎಲ್‌ಸಿ ಮುಖ್ಯಸ್ಥೆ ಮಲ್ಲಿಕಾ ಆರ್, ಪ್ರಾಚಾರ್ಯರಾದ ವಿ.ಎಂ ಅಡ್ನೂರ್, ಸಮಸ್ತ ಶಿಕ್ಷಕರು, ಶಿಕ್ಷಕೇತರ ಸಿಬ್ಬಂದಿ ವರ್ಗದವರು ಮತ್ತು ಮಕ್ಕಳು ಉಪಸ್ಥಿತರಿದ್ದರು.

ಇಸ್ರೈಲ್ ರೋಣದ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ಶ್ರೀನಿವಾಸ್ ಬಾಕಳೆ ಸ್ವಾಗತಿಸಿದರು. ಉಪ ಪ್ರಾಚಾರ್ಯ ಪಿ.ಜಿ ಬ್ಯಾಳಿ ಅತಿಥಿಗಳ ಪರಿಚಯ ಮಾಡಿದರು. ಬಾಲಾಜಿ ಪಾನಗಂಟಿ ಮತ್ತು ಸಂಗಡಿಗರು ಕಿರು ನಾಟಕ ಪ್ರದರ್ಶಿಸಿದರು. ಸ್ಫೂರ್ತಿ ಯಾದವಾಡ ಹಾಗೂ ಸಂಗಡಿಗರು ನೃತ್ಯವನ್ನು ಮಾಡಿದರು. ನಂದಿನಿ ಮಲ್ಲಪ್ಪನವರ ಶಿಕ್ಷಕರ ದಿನಾಚರಣೆ ಕುರಿತು ಮಾತನಾಡಿದಳು. ಅಪರ್ಣಾ ಕೊಟ್ನಿಕಲ್ ಮತ್ತು ಸಾಹಿಲ್ ತಂಬೋಟಿ ನಿರೂಪಿಸಿದರು.ಶ್ರೇಯಾ ನಾಯ್ಕರ್ ವಂದಿಸಿದಳು.

## ದಲಿತರಿಗೆ ಮೀಸಲಿಟ್ಟ ಅನುದಾನವನ್ನು ಮರಳಿ ನೀಡುವಂತೆ ಮನವಿ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ನಗರದ ನಂದೀಶ್ವರ ನಗರದಲ್ಲಿ ನಗರಸಭೆಯ ದಲಿತರಿಗೆ ಮೀಸಲಿಟ್ಟ ಅನುದಾನದಲ್ಲಿ ಈಜುಕೊಳ ನಿರ್ಮಿಸಿರುವುದನ್ನು ವಿರೋಧಿಸಿ ಮತ್ತು ಸದರಿ ಅನುದಾನವನ್ನು ಮರಳಿ ಗದಗ-ಬೆಟಗೇರಿ ನಗರಸಭೆಗೆ ನೀಡುವಂತೆ ಗದಗ ಜಿಲ್ಲಾಧಿಕಾರಿಗಳ ಕಚೇರಿಯ ಮುಖಾಂತರ ಮುಖ್ಯಮಂತ್ರಿಗಳಿಗೆ ಕರ್ನಾಟಕ ಮಾದಿಗ ಸಂಘರ್ಷ ಸಮಿತಿ ಮನವಿ ಸಲ್ಲಿಸಿತು.

ಮನವಿ ಸಲ್ಲಿಸಿ ಮಾತನಾಡಿದ ಜಿಲ್ಲಾ ಘಟಕದ ಅಧ್ಯಕ್ಷ ರಾಘವೇಂದ್ರ ಪರಸಪ್ಪ ಪರಾಪೂರ, ಗದಗ-ಬೆಟಗೇರಿ ನಗರಸಭೆಯು ದಲಿತರಿಗೆ ಮೀಸಲಿಟ್ಟ ಎಸ್‌ಎಫ್‌ಸಿಯ ಎಸ್‌ಸಿ/ಎಸ್‌ಪಿ ಅನುದಾನದಲ್ಲಿ 168.50 ಲಕ್ಷ ರೂ.ಗಳಲ್ಲಿ ಈಜುಕೊಳ ನಿರ್ಮಿಸಿ ಉದ್ಘಾಟನೆ ಮಾಡಲಾಯಿತು. ಕಳೆದ 5-6 ವರ್ಷಗಳಿಂದ ಗದಗ-ಬೆಟಗೇರಿ ನಗರಸಭೆಯು ದಲಿತರ, ಪೌರ ಕಾರ್ಮಿಕರ ಮಕ್ಕಳಿಗೆ ಉನ್ನತ ಶಿಕ್ಷಣ, ಅನಾರೋಗ್ಯ ಪೀಡಿತ ಪೌರಕಾರ್ಮಿಕರಿಗೆ ಮತ್ತು ಅವರ ಮಕ್ಕಳಿಗೆ ಮೆಡಿಕಲ್ ಬಿಲ್‌ಗಳನ್ನು ನೀಡಿಲ್ಲ. ಬಡ ದಲಿತ ಸಮುದಾಯದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಯಾವುದೇ ಆರ್ಥಿಕ ಸಹಾಯ ದೊರೆತಿಲ್ಲ. ದಲಿತರ ಅಭಿವೃದ್ಧಿಗಾಗಿ ಇರುವ ಹಣವನ್ನು ಬೇರೆ ಕೆಲಸಗಳಿಗೆ ಉಪಯೋಗಿಸುತ್ತಿದ್ದು, ದಲಿತರಿಗೆ ಸಿಗಬೇಕಾದ ನ್ಯಾಯ ಸಿಗುತ್ತಿಲ್ಲ ಎಂದರು.



ಈ ಕಾರ್ಯಕ್ಕೆ ವಿನಿಯೋಗಿಸಲಾದ ಹಳವನ್ನು ಗದಗ-ಬೆಟಗೇರಿ ನಗರಸಭೆಗೆ ಮರಳಿ ಬಿಡುಗಡೆ ಮಾಡಬೇಕೆಂದು ವಿನಂತಿ ಪತ್ರವನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ರಾಜ್ಯ ಕಾರ್ಮಿಕ ಮುಖಂಡರಾದ ರಾ.ದೆ ಕಾರಭಾರಿ, ರಮೇಶ ರಾಲದೊಡ್ಡಿ, ಯಲ್ಲಪ್ಪ ಮಾಳೆಕೊಪ್ಪ ಉಪಸ್ಥಿತರಿದ್ದರು.

### ಕಾಶೀವಿಶ್ವನಾಥ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು

# ಕಾಶೀವಿಶ್ವನಾಥ ಜಾತ್ರಾ ಮಹೋತ್ಸವ ನಾಳೆಯಿಂದ





■ವಿಜಯಸಾಕ್ಷಿ ಸುದ್ದಿ, ಗದಗ

ಗದುಗಿನ ಕಾಶೀವಿಶ್ವನಾಥ ನಗರ(ಬುಳ್ಳಾ ಪ್ಲಾಟ್)ದ ಶ್ರೀ ಕಾಶೀವಿಶ್ವನಾಥ ರಥೋತ್ಸವ ಹಾಗೂ ಜಗನ್ಮಾತೆ ಶ್ರೀ ದುರ್ಗಾದೇವಿಗೆ ಉಡಿ ತುಂಬುವ ಕಾರ್ಯಕ್ರಮ, ಧರ್ಮಸಭೆ, ಸಾಂಸ್ಕೃತಿಕ ಹಾಗೂ ರಸಮಂಜರಿ ಕಾರ್ಯಕ್ರಮಗಳು ಸೆ.8ರಿಂದ 10ರವರೆಗೆ ನಡೆಯಲಿವೆ.

ಸೆ. 8ರಂದು ಶುಕ್ರವಾರ ಬೆಳಿಗ್ಗೆ 5.30ಕ್ಕೆ ಕಾಶೀವಿಶ್ವನಾಥನಿಗೆ ಅಭಿಷೇಕ, ಮುಂಜಾನೆ 9 ಗಂಟೆಗೆ ಶ್ರೀ ದುರ್ಗಾದೇವಿಗೆ ಉಡಿ ತುಂಬುವ ಕಾರ್ಯಕ್ರಮ, ಮಧ್ಯಾಹ್ನ 12.30ಕ್ಕೆ 31ನೇ ವರ್ಷದ ಸಾಮೂಹಿಕ ವಿವಾಹ ಹಾಗೂ ಧರ್ಮಸಭೆ ನಡೆಯಲಿದೆ.

ವೀರೇಶ್ವರ ಪುಣ್ಯಾಶ್ರಮದ ಪೂಜ್ಯ ಕಲ್ಲಯ್ಯಜ್ಜನವರು ಸಾನ್ನಿಧ್ಯ ವಹಿಸುವರು, ಅಧ್ಯಕ್ಷತೆಯನ್ನು ಜಾತ್ರಾ ಸಮಿತಿಯ ಅಧ್ಯಕ್ಷ ಸಂಗಪ್ಪ ಲೇಬಗೇರಿ ವಹಿಸುವರು. ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕ ಡಿ.ಆರ್ ಪಾಟೀಲ, ಗಣ್ಯರಾದ ಸಿದ್ಧಲಿಂಗಪ್ಪ ಮಾನ್ವಿ, ಶಂಕರ ಹಾನಗಲ್ಲ, ತೋಂಟೇಶ ಕುರಡಗಿ, ದುಂಡಪ್ಪ ಆಸಂಗಿ ಆಗಮಿಸುವರು.

ಅತಿಥಿಗಳಾಗಿ ನಗರಸಭೆಯ ಮಾಜಿ ಅಧ್ಯಕ್ಷ ಬಿ.ಬಿ ಅಸೂಟಿ, ಸದಸ್ಯೆ ಲಲಿತಾ ಅಸೂಟಿ, ಗಣ್ಯರಾದ ಶಾಂತಪ್ಪ ಮುಳವಾಡ, ಅಂಬರೀಶ ಅಂಗಡಿ, ವಿರುಪಾಕ್ಷಪ್ಪ ರಾಮಗಿರಿ, ರಮೇಶ ನಿಂಬನಗೌಡ್ರ ಆಗಮಿಸುವರು. ಸಂಜೆ 6 ಗಂಟೆಗೆ ಕಾಶೀ ವಿಶ್ವನಾಥನ ಮಹಾರಥೋತ್ಸವವು ಜರುಗುವದು.

ಸೆ. 9ರಂದು ಮುಂಜಾನೆ 10 ಗಂಟೆಗೆ ಸ್ಲೋ ಸೈಕ್ಲಿಂಗ್, ಚೆಸ್, ಕೇರಂ ಸ್ಪರ್ಧೆ, ಸಂಜೆ 4ಕ್ಕೆ ಮಹಿಳೆಯರಿಗಾಗಿ ರಂಗೋಲಿ ಸ್ಪರ್ಧೆ, ಸಂಜೆ 7ಕ್ಕೆ ಸನ್ಮಾನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಹರ್ಲಾಪೂರದ ಕೊಟ್ಟೂರೇಶ್ವರ ಮಠದ ಪೂಜ್ಯ ಡಾ.ಕೊಟ್ಟೂರೇಶ್ವರ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ ಪಾಟೀಲ ಆಗಮಿಸುವರು. ಅಧ್ಯಕ್ಷತೆಯನ್ನು ಕಾಶೀವಿಶ್ವನಾಥ ನಗರದ ಅಧ್ಯಕ್ಷ ದುಂಡಪ್ಪ ಆಸಂಗಿ ವಹಿಸುವರು. ಅತಿಥಿಗಳಾಗಿ ಗಣ್ಯರಾದ ರಮೇಶ ಸುಣಗಾರ, ಕಿರಣ ಭೂಮಾ, ಶಾಂತಪ್ಪ ಮಾಳವಾಡ, ಬಿ.ಬಿ ಅಸೂಟಿ, ಲಲಿತಾ ಅಸೂಟಿ, ಸಂಗಪ್ಪ ಲೇಬಗೇರಿ, ಅಂಬರೀಶ ಅಂಗಡಿ, ವಿರುಪಾಕ್ಷಪ್ಪ ರಾಮಗಿರಿ, ರಮೇಶ ನಿಂಬನಗೌಡ್ರ ಆಗಮಿಸುವರು. ಸಿಪಿಐ ಬಿ.ಜಿ ಸುಬ್ಬಾಪೂರಮಠ, ಪರಶುರಾಮ ನಾಯ್ಕರ್, ಶರಣಪ್ಪ ಜಗ್ಗಲ, ರವಿಕುಮಾರ ದುಂಡಸಿ ಅವರನ್ನು ಸನ್ಮಾನಿಸಲಾಗುವುದು ಎಂದು ಜಾತ್ರಾ ಸಮಿತಿಯ ಕಾರ್ಯದರ್ಶಿ ರಮೇಶ ನಿಂಬನಗೌಡ್ರ ತಿಳಿಸಿದ್ದಾರೆ.

ಸೆ. 10ರಂದು ಸಂಜೆ 5.30ಕ್ಕೆ ನಡೆಯುವ ಸನ್ಮಾನ ಹಾಗೂ ರಸಮಂಜರಿ ಕಾರ್ಯಕ್ರಮದ ಸಾನ್ನಿಧ್ಯವನ್ನು ಲಕ್ಕುಂಡಿಯ ಅಲ್ಲಮ ಪ್ರಭುದೇವರ ಮಠದ ಪೂಜ್ಯ ಸಿದ್ಧಲಿಂಗ ಮಹಾಸ್ವಾಮಿಗಳು ವಹಿಸುವರು. ಮುಖ್ಯ ಅತಿಥಿಗಳಾಗಿ ವಿ.ಪ ಸದಸ್ಯ ಎಸ್.ವ್ಹಿ ಸಂಕನೂರ, ಜಿಲ್ಲಾಧಿಕಾರಿ ಎಂ.ಎಲ್ ವೈಶಾಲಿ, ಎಸ್ಪಿ ಬಿ.ಎಸ್ ನೇಮಗೌಡ, ದುಂಡಪ್ಪ ಆಸಂಗಿ, ಶಾಂತಪ್ಪ ಮುಳವಾಡ, ಬಿ.ಬಿ ಅಸೂಟಿ, ಲಲಿತಾ ಅಸೂಟಿ ಆಗಮಿಸುವರು. ಅಧ್ಯಕ್ಷತೆಯನ್ನು ಸಂಗಪ್ಪ ಲೇಬಗೇರಿ ವಹಿಸುವರು. ಮಧುಸೂದನ ಪುಣೇಕರ, ಶರಣಬಸಪ್ಪ ಗುಡಿಮನಿ, ಪ್ರವೀಣ ವಾರಕರ, ವಿರುಪಾಕ್ಷಪ್ಪ ರಾಮಗಿರಿ, ಅಂಬರೀಶ ಅಂಗಡಿ, ರಮೇಶ ನಿಂಬನಗೌಡ್ರ, ಪ್ರಕಾಶ ವೈಲಾಯ, ಗೋಪಾಲ ರಾಯರ ಅವರನ್ನು ಸನ್ಮಾನಿಸಲಾಗುವುದು. ಸಂಜೆ 7ಕ್ಕೆ ರಸಮಂಜರಿ ಕಾರ್ಯಕ್ರಮ ನಡೆಯಲಿದೆ.

## ಸೆ. 15ರಂದು ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ

■ವಿಜಯಸಾಕ್ಷಿ ಸುದ್ದಿ, ಗದಗ

ಭಾರತದ ಸಂವಿಧಾನವನ್ನು ಓದುವ ಮೂಲಕ ಕರ್ನಾಟಕ ಸರ್ಕಾರವು ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯನ್ನು ಸೆಪ್ಟೆಂಬರ್ 15 ರಂದು ಬೆಳಿಗ್ಗೆ 10 ಗಂಟೆಗೆ ಆಚರಿಸುತ್ತಿದೆ.

ಭಾರತೀಯರಾದ ನಾವು ಭಾರತವನ್ನು ಸಾರ್ವಭೌಮ ಸಮಾಜವಾದಿ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ರಚಿಸಿ ನಮಗೆ ನಾವೇ ಸಂವಿಧಾನವನ್ನು ಅರ್ಪಿಸಿಕೊಂಡಿದ್ದೇವೆ.

ಈ ಸಂವಿಧಾನ ಪೀಠಿಕೆಯನ್ನು ಭಾರತೀಯರಾದ ನಾವುಗಳೆಲ್ಲರೂ ಓದುವ ಮೂಲಕ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯನ್ನು ಆಚರಿಸೋಣ. ಸೆಪ್ಟೆಂಬರ್ 12 ರವರೆಗೆ https://thepreamble-swdkar.in ಈ ವೆಬ್ ಸೈಟ್ ನಲ್ಲಿ ಜಿಲ್ಲೆಯ ಸಾರ್ವಜನಿಕರು, ಶಾಲಾಮಕ್ಕಳು ನೊಂದಾಯಿಸಿಕೊಂಡು ಸೆಪ್ಟೆಂಬರ್ 15 ರಂದು ಬೆಳಿಗ್ಗೆ 10 ಗಂಟೆಗೆ ಏಕಕಾಲಕ್ಕೆ ಸಂವಿಧಾನ ಪೀಠಿಕೆ ಓದುವ ಮೂಲಕ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಯಶಸ್ವಿಗೊಳಿಸೋಣ.

ರಾಜ್ಯದ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಹಾಗೂ ಸಚಿವರುಗಳು ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಸೆಪ್ಟೆಂಬರ್ 15 ರಂದು ಬೆ 10 ಗಂಟೆಗೆ ವಿಧಾನಸೌಧದ ಮುಂಭಾಗದ ವಿಶಾಲವಾದ ಮೆಟ್ಟಿಲುಗಳು ಮತ್ತು ಪ್ರದೇಶದಲ್ಲಿ 10,000 ವಿದ್ಯಾರ್ಥಿಗಳೊಡನೆ ಭಾರತದ ಸಂವಿಧಾನ ಪೀಠಿಕೆಯನ್ನು ಓದಲಿದ್ದಾರೆ. ಅದರಂತೆ ಜಿಲ್ಲಾ ಮಟ್ಟದಲ್ಲಿ ಸಂವಿಧಾನ ಪೀಠಿಕೆಯನ್ನು ನಾವೆಲ್ಲರೂ ಓದೋಣ ಎಂದು ಜಿಲ್ಲಾದಿಕಾರಿ ವೈಶಾಲಿ ಎಂ.ಎಲ್. ಅವರು ಕೋರಿದ್ದಾರೆ.


ಕರ್ನಾಟಕ ಸರ್ಕಾರ

**ಕಾರ್ಯನಿರ್ವಾಹಕ ಅಭಿಯಂತರರು, ಯೋಜನಾ ವಿಭಾಗ ಕಚೇರಿ,**

ಡಾ॥ ಹುಯಿಲಗೋಳ ಹಾಸ್ಪಿಟಲ್ ಬಿಲ್ಡಿಂಗ, 1ನೇ ಮಹಡಿ, ಹುಬ್ಬಳ್ಳಿ ರಸ್ತೆ, ಗದಗ

ಫೋನ್/ಫ್ಯಾಕ್ಸ್ : 08372-220121 ಇ-ಮೇಲ್ : kn-gad@pmgsy.nic.in

ಕ್ರ.ಸಂ./ಕಾ.ನಿ.ಇಂ./ಯೋವಿಗ/ವಾಹನ ಟೆಂಡರ/2023-24/348 ದಿನಾಂಕ:05-09-2023

**ಬಾಡಿಗೆ ವಾಹನವನ್ನು ಒದಗಿಸಲು ಅಲ್ಪಾವಧಿ ಟೆಂಡರ ಪ್ರಕಟಣೆ**

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರು, ಯೋಜನಾ ವಿಭಾಗ, ಗದಗ ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000 ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ ಕರೆದಿರುವ ಟೆಂಡರನಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು Karnataka Public Procurement Portal, **https://kppp.karnataka.gov.in** ಮುಖಾಂತರ ಭಾಗವಹಿಸಬಹುದು. ಉಪ ವಿಭಾಗ ಕಛೇರಿಗೆ ಬಾಡಿಗೆ ಆಧಾರದ ಮೇಲೆ ವಾಹನಕ್ಕೆ ಟೆಂಡರಿಗಿಟ್ಟ ಮೊತ್ತ ರೂ. **4,68,000.00,** E.M.D. ಮೊತ್ತ ರೂ. **10,000.00,** ಪೂರ್ಣಗೊಳಿಸಲು ನಿಗಧಿಪಡಿಸಿದ ಅವಧಿ 12 ತಿಂಗಳು, ವಿಚಾರಣಾ ಮಾಡುವ ಕೊನೆಯ ದಿನಾಂಕ : **14-09-2023** ರಂದು 16.30 ಗಂಟೆಯವರೆಗೆ, Karnataka Public Procurement Portal ನಲ್ಲಿ ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : **15-09-2023** ರಂದು 16.30 ಗಂಟೆಯ ವರೆಗೆ, ಟೆಂಡರ ತೆರೆಯುವ ದಿನಾಂಕ : **16-09-2023** ರಂದು 16.35 ಗಂಟೆಗೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ, ಈ ಕೆಳಗೆ ಸಹಿ ಮಾಡಿದವರ ಕಚೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಅಥವಾ ವೆಬ್ ಸೈಟಿನಲ್ಲಿಯು **https://kppp.karnataka.gov.in** ರಲ್ಲಿ ಪಡೆಯಬಹುದು.

**ಸೂಚನೆ :** (1) ಉಪ ವಿಭಾಗ ಕಛೇರಿಗೆ 2020 ನಂತರದ ಮಾಡೆಲ್ ವಾಹನಗಳು **(Tata Indica / Swift or similar type Non AC Vehicle)** ಇರಬೇಕು. (2) ಹಳದಿ ಬೋರ್ಡ ಹೊಂದಿರಬೇಕು.

**ಸಹಿ/- ಕಾರ್ಯನಿರ್ವಾಹಕ ಅಭಿಯಂತರು**

ವಾಸಾಸಂಇ/ಗದಗ/ಕೆಎಸ್‌ಎಂಸಿಎ/164/2023-24 **ಯೋಜನಾ ವಿಭಾಗ, ಗದಗ**

# ಸಮಾನತೆಯ ತತ್ವ ಸಂದೇಶಗಳನ್ನು ಸಾರಿದವರು ಬಸವಣ್ಣ

■ವಿಜಯಸಾಕ್ಷಿ ಸುದ್ದಿ, ಗದಗ



ಭಕ್ತಿ ಭಂಡಾರಿ ಅಪ್ಪ ಬಸವಣ್ಣನವರು ವಿಶ್ವಕ್ಕೆ ಬೆಳಕಾಗಿದ್ದವರು. ಬಸವಣ್ಣನವರು ಉದಯಿಸುತ್ತಿರುವ ಸೂರ್ಯನಂತೆ ಪ್ರಕಾಶಮಾನ್ಯವಾಗಿದ್ದಾರೆ. ಸಮಾಜದಲ್ಲಿ ಪ್ರತಿಯೊಬ್ಬರ ಬದುಕಿಗೂ ಸಮಾನತೆಯ ತತ್ವದ ಸಂದೇಶವನ್ನು ಸಾರಿದ ಮಹಾತ್ಮ ಬಸವಣ್ಣನವರು ನಮ್ಮೆಲ್ಲರಿಗೂ ಮಾರ್ಗದರ್ಶಿಯಾಗಿದ್ದಾರೆ ಎಂದು ಶರಣೆ ಮಂಗಳಕ್ಕ ಕಾಮಣ್ಣರವರು ಹೇಳಿದರು.

ನಗರದ ಒಕ್ಕಲಗೇರಿ ಓಣಿಯ ಶರಣ ದುಂಡೇಶ ಈಶ್ವರಪ್ಪ ಕೋರಿ ಅವರ ನಿವಾಸದಲ್ಲಿ ನಡೆದ ವಚನ ಶ್ರಾವಣ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡುತ್ತಿದ್ದರು.

ಬಸವಣ್ಣನವರ ವಚನ ಚಿಂತನೆಗಳನ್ನು ಎಲ್ಲರೂ ಜೀವನದಲ್ಲಿ ಅಳವಡಿಸಿಕೊಂಡು ಮುಂದೆ ನಡೆಯಬೇಕು. ಶರಣರು ಕಲ್ಯಾಣ ಕ್ರಾಂತಿಯಾದ ನಂತರ ವಚನ ಸಾಹಿತ್ಯವನ್ನು ಕಾಪಾಡಿಕೊಳ್ಳುವುದಕ್ಕೆ ಕಲ್ಯಾಣದಿಂದ ಉಳುವಿಯವರೆಗೂ ನಡೆದರು. ವಚನ ಸಾಹಿತ್ಯವನ್ನು ಉಳಿಸಿಕೊಳ್ಳಲು ತಮ್ಮ ಪ್ರಾಣವನ್ನೂ ಲೆಕ್ಕಿಸದೇ ಹಗಲು-ರಾತ್ರಿ ಎನ್ನದೆ ಹೋರಾಡಿ ತಮ್ಮ ಜೀವವನ್ನು ಮುಡಿಪಾಗಿಟ್ಟರು ಎಂದು ವಿವರಿಸಿದರು.

ಪೂಜಾ ಕೋರಿ ಸ್ವಾಗತಿಸಿದರು. ಮಂಜುಳಾ ಹಾಸಲಕರ ನಿರೂಪಿಸಿದರು. ಸಭೆಯಲ್ಲಿ ಬಿ.ವಿ ಕಾಮಣ್ಣವರ, ಮಂಗಳಕ್ಕ ಕಾಮಣ್ಣವರ, ಚನ್ನಬಸವಣ್ಣ ಕಾಮಣ್ಣವರ, ಭೂಮಿಕಾ ಕಾಮಣ್ಣವರ, ಪ್ರಕಾಶ್ ಅಸುಂಡಿ, ನಾಗರತ್ನ ಅಸುಂಡಿ, ನಾಗಭೂಷಣ ಬಡಿಗಣ್ಣವರ, ಗೌರಕ್ಕ ಬಡಿಗಣ್ಣವರ, ಶಾಂತವೀರ ನಾಯಿನೇಗಲಿ, ವಿ.ಕೆ ಕರೇಗೌಡ್ರ, ಈರಣ್ಣ ಹೊನ್ನಗಣ್ಣವರ, ರೇಣುಕಾ ಕರೇಗೌಡ್ರ, ಮಂಜುನಾಥ ಲಾಲಗೊಂಡ, ಆಕಾಶ ಲಾಲಗೊಂಡ, ಸಿದ್ದಲಿಂಗಪ್ಪ ನಾರಾಯಣಪುರ, ಬಸವರಾಜ ಕೋರಿ, ಶೇಖಪ್ಪ ಹೊಂಬಳ, ರವಿ ಮಾನ್ವಿ, ಶ್ರವಣ ಕೋರಿ, ದುಂಡೇಶ ಕೋರಿ, ಶಶಾಂತ ಕೋರಿ, ಸೋಮಶೇಖರ ಪುರಾಣಿಕ, ಸಿ.ಆರ್ ಗಡಾದ, ಸಿದ್ದಲಿಂಗಪ್ಪ ಅರಳಿ, ದೇವಕ್ಕ ದೇವರಮನಿ, ಇಂದುಮತಿ ಕೋರಿ, ಮಹೇಶ್ವರಿ, ಲೀಲಾವತಿ, ಶಿಲ್ಪಾ ಮಾನ್ವಿ, ಶಾರದಾ ಕೋರಿ, ಬಿ.ಜಿ ನೀಲೂಗಲ್ಲ, ಗಿರಿಜವ್ವ ತುಪ್ಪದ, ಐಶ್ವರ್ಯ, ಈರಮ್ಮ ಮಾನ್ವಿ, ರೋಹನ ಕೋರಿ ಮುಂತಾದವರಿದ್ದರು.

---

**ಸರಕಾರಿ ಪ್ರೌಢಶಾಲೆಯ ಪಿಂಕ್ ಶೌಚಾಲಯ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿದ ವಿದ್ಯಾ ಗಡಗಿ**

# ಬಸವರಾಜ ಹೊರಟ್ಟಿ ನಾಡಿನ ಅಪರೂಪದ ಜನಪ್ರತಿನಿಧಿ

■ವಿಜಯಸಾಕ್ಷಿ ಸುದ್ದಿ, ಗದಗ



ಕಳೆದ ನಾಲ್ಕು ದಶಕಗಳಿಂದ ಸಾರ್ವಜನಿಕ ಜೀವನದಲ್ಲಿದ್ದು, ಯಾವುದೇ ಕಳಂಕವನ್ನು ಮೈಗಂಟಿಸಿಕೊಳ್ಳದೇ ಸರ್ವ ಸಮುದಾಯದ ಹಿತ ಕಾಯುತ್ತಾ ಬಂದಿರುವ ಸಭಾಪತಿ ಬಸವರಾಜ ಹೊರಟ್ಟಿಯವರು ನಾಡಿನ ಅಪರೂಪದ ಜನಪ್ರತಿನಿಧಿ ಎಂದು 34ನೇ ವಾರ್ಡಿನ ನಗರಸಭಾ ಸದಸ್ಯೆ ವಿದ್ಯಾ ಗಡಗಿ ಅಭಿಪ್ರಾಯಪಟ್ಟರು.

ಅವರು ಸರಕಾರಿ ಪ್ರೌಢಶಾಲೆ ಸಿದ್ಧಲಿಂಗ ನಗರದಲ್ಲಿ ಬಸವರಾಜ ಹೊರಟ್ಟಿಯವರು ನೀಡಿದ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯ ಅನುದಾನದಡಿಯಲ್ಲಿ ಪಿಂಕ್ ಶೌಚಾಲಯ ನಿರ್ಮಾಣದ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ಬಸವರಾಜ ಹೊರಟ್ಟಿ ದಂಪತಿಗಳು ಗದುಗಿನ ಸಿದ್ಧಲಿಂಗ ನಗರದ ಸರಕಾರಿ ಪ್ರೌಢಶಾಲೆಯನ್ನು ದತ್ತು ಪಡೆದು ಶಾಲೆಯ ಕಳೆಯನ್ನು ಹೆಚ್ಚಿಸುವ ಮೂಲಕ ಜಿಲ್ಲೆಯಲ್ಲಿ ಒಂದು ಮಾದರಿ ಶಾಲೆಯನ್ನಾಗಿ ನಿರ್ಮಿಸಿದ್ದಾರೆ. ಹೊರಟ್ಟಿಯವರ ಸಹಕಾರದಿಂದ ಈಗಾಗಲೇ ಈ ಶಾಲೆಯಲ್ಲಿ ರಂಗಮಂದಿರ, ಕಂಪೌಂಡ್ ನಿರ್ಮಾಣ, ಮೈದಾನಕ್ಕೆ ಪೇವರ್ಸ್, ಮಕ್ಕಳಿಗೆ ಊಟದ ತಟ್ಟೆ, ಶಾಲೆಗೆ ಹಾಗೂ ಶಿಕ್ಷಕರಿಗೆ ಉಪಯುಕ್ತ ಪರಿಕರಗಳು, ಗಣಿತ ಪ್ರಯೋಗಾಲಯ ಹಾಗೂ ಸಂಶೋಧನಾ ಕೇಂದ್ರ ನಿರ್ಮಾಣ, ಈಗ ಬಾಲಕರಿಗೆ, ಬಾಲಕಿಗೆ ಪ್ರತ್ಯೇಕ ಶೌಚಾಲಯ, ಹಾಗೂ ಸಿಬ್ಬಂದಿಗೆ ಶೌಚಾಲಯದ ನಿರ್ಮಾಣಕಾರ್ಯ ಆರಂಭವಾಗಿದ್ದು ಖುಷಿ ತಂದಿದೆ ಎಂದರು.

ಈ ಸಂದರ್ಭದಲ್ಲಿ ಅವ್ವ ಸೇವಾ ಟ್ರಸ್ಟ್ ಸಂಚಾಲಕ ಡಾ.ಬಸವರಾಜ ಧಾರವಾಡ, ಸಾ.ಶಿ.ಇಲಾಖೆಯ ಉಪನಿರ್ದೇಶಕ ಎಂ.ಎ ರಡ್ಡೇರ, ಅಕ್ಷರದಾಸೋಹ ಶಿಕ್ಷಣಾಧಿಕಾರಿ ಸರಸ್ವತಿ ಡಿ.ಕನವಳ್ಳಿ, ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್ ಬುರಡಿ, ಮುಖ್ಯೋಪಾಧ್ಯಾಯೆ ಪಾರ್ವತಿ ವಸ್ತ್ರದ, ಜಯಲಕ್ಷ್ಮೀ ಬಿ. ಅಣ್ಣಿಗೇರಿ, ಎಸ್.ಆರ್ ಹನಮಗೌಡ್ರ, ಎಸ್.ಜಿ ಕುಲಗುಡಿ, ಎಮ್.ಆಯ್ ಶಿವನಗೌಡ್ರ, ಎಂ.ಪಿ ಸಾಂಬ್ರಾಣಿ, ಎಸ್.ಬಿ ಗುಳೇದವರ, ಎಸ್.ಎಂ ಪತ್ತಾರ, ಎಸ್.ಎಸ್ ಗಾಳಿ, ಆರ್.ವಾಯ್ ಬಸರಿ, ಎಸ್.ಎ ಬಾಣದ, ಎಸ್.ಎ ಗದ್ದನಕೇರಿ, ಎನ್.ಆರ್ ಶಿರೋಳ, ಎಸ್.ಯು ಕುಷ್ಟಗಿ, ಜಿ.ಎನ್ ಅಳವಂಡಿ, ಪಿ.ವ್ಹಿ ದಾಸರ, ಎಲ್.ಎಸ್ ಮಾಳೊತ್ತರ ಮುಂತಾದವರು ಉಪಸ್ಥಿತರಿದ್ದರು.

---

# ಸಾಯಿಬಾಬಾ ಮಂದಿರದಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ

■ವಿಜಯಸಾಕ್ಷಿ ಸುದ್ದಿ, ಮುಂಡರಗಿ



ಪಟ್ಟಣದ ಶ್ರೀ ಶಿರಡಿ ಸಾಯಿಬಾಬಾ ದೇವಸ್ಥಾನದಲ್ಲಿ ಬುಧವಾರ ಶ್ರೀಕೃಷ್ಣ ಜನ್ಮಾಷ್ಟಮಿ ನಿಮಿತ್ತ ವಿಶೇಷ ಪೂಜಾ ಕಾರ್ಯಕ್ರಮಗಳು ಜರುಗಿದವು.

ಬೆಳಿಗ್ಗೆ ಶ್ರೀ ಕೃಷ್ಣನ ತೊಟ್ಟಿಲೋತ್ಸವ, ಸಾಯಿಬಾಬಾ ಮೂರ್ತಿಗೆ ಮಂಗಲ ಸ್ನಾನ, ಆರತಿ, ಲಘು ರುಧ್ರಾಭಿಷೇಕ, ಪಂಚಾಮೃತ ಅಭಿಷೇಕ, ಮಹಾಭಿಷೇಕ, ಕ್ಷೀರಾಭಿಷೇಕ, ಬಿಲ್ವಾರ್ಚನೆ, ಕುಂಕುಮಾರ್ಚನೆ, ಧೂಪಾರ್ಚನೆ, ಸರ್ವಸೇವಾ ಅಲಂಕಾರ ನಡೆಯಿತು. ಮಧ್ಯಾಹ್ನ ನೈವೇದ್ಯ, ಆರತಿ, ಮಹಾಮಂಗಳಾರತಿ, ಮಹಾಪ್ರಸಾದ, ಸೂರ್ಯಾಸ್ಥಕ್ಕೆ ಧೂಪಾರತಿ, ಶೇಜಾರತಿಗಳು ನೆರವೇರಿದವು.

ವಿಶ್ವನಾಥಭಟ್ಟ ಜೋಶಿ ಹಾಗೂ ಜಯಣ್ಣ ಪಾಸಿ ಪೂಜಾ ಕೈಂಕರ್ಯಗಳನ್ನು ನಡೆಸಿಕೊಟ್ಟರು. ಶ್ವೇತಾ ಭಜಂತ್ರಿ, ಸಂಗೀತಾ ಕಾರ್ಯಕ್ರಮ ನಡೆಸಿಕೊಟ್ಟರು ಸುಮಾ ಕುಂಬಾರ ಸಂಜನಾ ಕಪಟ್ಟಕರ, ರೂಪಾಭಾಯಿ ಬೋಸ್ಲೆ, ಸಂತೋಷ ಕಪಟ್ಟಕರ, ಭುವನೇಶ್ವರಿ ಕರವೀರಮಠ, ಗೀತಾ ಹಿರೇಮಠ, ಚನಮ್ಮ ಬೀಳಗಿಮಠ, ನಾಗರಾಜ ಕುಂಬಾರ, ಹೇಮಾ, ಮಂಜುಳಾ ಸಜ್ಜನ, ರತ್ನಬಾಯಿ ಕಪಟ್ಟಕರ, ಇದ್ದರು. ಶ್ರೀಮತಿ ಸುಮಂಗಲಾ ಸರ್ವೆ, ಡಾ.ಈರಣ್ಣ ಸರ್ವೆ ಅವರ ಪುತ್ರಿಯ ತುಲಾಭಾರ ಭಕ್ತಿ ಸೇವೆ ನೆರವೇರಿಸಿದರು.

---

# ಸರಕಾರಿ ಐಟಿಐ ಕಾಲೇಜು ಕಟ್ಟಡದ ಕಾಮಗಾರಿ ಕಳಪೆ: ತನಿಖೆಗೆ ಆಗ್ರಹ

■ವಿಜಯಸಾಕ್ಷಿ ಸುದ್ದಿ, ಗದಗ



ತಾಲೂಕಿನ ಹೊಂಬಳ ಗ್ರಾಮದ ಗದಗ-ಹೊಂಬಳ ರಸ್ತೆಯಲ್ಲಿ ಶ್ರೀಮತಿ ಪಾರ್ವತಮ್ಮ ಮತ್ತು ಶ್ರೀ ಶಂಕ್ರಪ್ಪ ಶಿವಲಿಂಗಪ್ಪ ಮೈಲಾರ ಸ್ಮಾರಕ ಹೆಸರಿನಲ್ಲಿ ನಿರ್ಮಾಣಗೊಂಡಿರುವ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಕಟ್ಟಡ ಶೇ.40ರಷ್ಟು ಕಳಪೆ ಕಾಮಗಾರಿಯಿಂದ ಕೂಡಿದೆ. ಈ ಹಿಂದೆ ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿಗಳಿಗೆ ಜೆಡಿಎಸ್ ಪಕ್ಷದ ವತಿಯಿಂದ ಮನವಿ ಸಲ್ಲಿಸಿದರೂ ಕ್ರಮ ಕೈಗೊಂಡಿಲ್ಲ ಎಂದು ಜಿಲ್ಲಾ ಜೆಡಿಎಸ್ ಆರೋಪಿಸಿದೆ.

ಜಿಲ್ಲಾಡಳಿತ ಮತ್ತು ಇಲಾಖೆಯ ಅಧಿಕಾರಿಗಳು ದೂರಿನ ಕುರಿತು ತನಿಖೆ ಮಾಡಿಸದೇ ಕಾಲೇಜು ಕಟ್ಟಡವನ್ನು ತರಾತುರಿಯಲ್ಲಿ ಉದ್ಘಾಟನೆ ಮಾಡಿರುವುದು ಸಂಶಯಕ್ಕೀಡುಮಾಡಿದೆ. ಜಿಲ್ಲಾಧಿಕಾರಿಗಳು ತಕ್ಷಣ ಮಧ್ಯ ಪ್ರವೇಶಿಸಿ, ಸಂಬಂಧಪಟ್ಟ ಅಭಿಯಂತರರು ಮತ್ತು ಗುತ್ತಿಗೆದಾರರನ್ನು ತನಿಖೆಗೆ ಒಳಪಡಿಸಬೇಕು ಮತ್ತು ಗುತ್ತಿಗೆದಾರರ ಪರವಾನಿಗೆಯನ್ನು ತಕ್ಷಣವೇ ಕಪ್ಪು ಪಟ್ಟಿಗೆ ಸೇರಿಸಬೇಕು. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ತಕ್ಷಣವೇ ಅಮಾನತ್ತು ಮಾಡಬೇಕು. ಇಲ್ಲವಾದರೆ ಜಾತ್ಯಾತೀತ ಜನತಾದಳ ಪಕ್ಷ ಗದಗ ಜಿಲ್ಲಾ ವತಿಯಿಂದ ಉಗ್ರ ಹೋರಾಟ ಮಾಡಲಾಗುವುದು ಎಂದು ಜೆಡಿಎಸ್ ಪಕ್ಷದ ಗದಗ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಾವಲ ಎಂ.ಮುಳಗುಂದ ಹಾಗೂ ಪದಾಧಿಕಾರಿಗಳು ಪತ್ರಿಕಾ ಹೇಳಿಕೆ ನೀಡಿದ್ದಾರೆ.

---

**ಆನೆ ದಾಳಿಯಿಂದ ಮೃತಪಟ್ಟ ವೆಂಕಟೇಶ್ ಮನೆಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಭೇಟಿ**

# ಆನೆ ವೆಂಕಟೇಶ್ ನಿಧನ ಅರಣ್ಯ ಇಲಾಖೆಗೆ ತುಂಬಲಾರದ ನಷ್ಟ

■ವಿಜಯಸಾಕ್ಷಿ ಸುದ್ದಿ, ಹಾಸನ



ಇತ್ತೀಚೆಗೆ ಆನೆ ಕಾರ್ಯಾಚರಣೆಯ ವೇಳೆ ಹಾಸನ ಜಿಲ್ಲೆ ಆಲೂರು ತಾಲೂಕಿನ ಕೆ ಹೊಸಕೋಟೆ ಹೋಬಳಿ ಹಳ್ಳಿಯೂರಿನಲ್ಲಿ ಕಾಡಾನೆ ದಾಳಿಯಿಂದ ಗಾಯಗೊಂಡು ಚಿಕಿತ್ಸೆ ಫಲಕಾಣದೆ ಮೃತಪಟ್ಟ ಶಾರ್ಪ್ ಶೂಟರ್ ಹೆಚ್.ಹೆಚ್ ವೆಂಕಟೇಶ್ ಅವರ ಕುಟುಂಬಕ್ಕೆ ಅರಣ್ಯ ಪ್ರತಿಷ್ಠಾನದ ವತಿಯಿಂದ 10 ಲಕ್ಷ ರೂ. ವಿಶೇಷ ಪರಿಹಾರ ನೀಡುವುದಾಗಿ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಘೋಷಿಸಿದರು.

ಬುಧವಾರ ಹೊನ್ನವಳ್ಳಿಯಲ್ಲಿರುವ ವೆಂಕಟೇಶ್ ಅವರ ಮನೆಗೆ ಭೇಟಿ ನೀಡಿದ ಸಚಿವರು, ಮೃತ ವೆಂಕಟೇಶ್ ಅವರ ಪತ್ನಿ ಜಿ.ಎಸ್ ಮಂಜುಳಾ, ಪುತ್ರರಾದ ಮೋಹಿತ್, ಮಿಥುನ್ ಮತ್ತು ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು.

ಕಾಡಾನೆ ದಾಳಿಯಿಂದ ಮೃತ ವೆಂಕಟೇಶ್ ಕುಟುಂಬಕ್ಕೆ ಈಗಾಗಲೇ 15 ಲಕ್ಷ ರೂ. ಪರಿಹಾರ ವಿತರಣೆ ಮಾಡಲಾಗಿದೆ. ಇದನ್ನು ವಿಶೇಷ ಪ್ರಕರಣ ಎಂದು ಪರಿಗಣಿಸಿ, ಒಂದು ವಾರದಲ್ಲಿ ಸ್ಥಳೀಯ ಜನಪ್ರತಿನಿಧಿಗಳೊಂದಿಗೆ ಅಧಿಕಾರಿಗಳು ಆಗಮಿಸಿ ಕುಟುಂಬಕ್ಕೆ 10 ಲಕ್ಷ ರೂ. ಪರಿಹಾರದ ಚೆಕ್ ಹಸ್ತಾಂತರ ಮಾಡುತ್ತಾರೆ ಎಂದು ತಿಳಿಸಿದರು.

ವೆಂಕಟೇಶ್ ಅವರು ತಮ್ಮ ಅದ್ಭುತ ಕಾರ್ಯದಿಂದ ಆನೆ ವೆಂಕಟೇಶ್ ಎಂದೇ ಖ್ಯಾತರಾಗಿದ್ದರು. ಶಾರ್ಪ್ ಶೂಟರ್ ವೆಂಕಟೇಶ್ ಅವರ ನಿಧನದಿಂದ ಅರಣ್ಯ ಇಲಾಖೆಗೆ ತುಂಬಲಾರದ ನಷ್ಟವಾಗಿದೆ. ನಿಮ್ಮ ಈ ನೋವಿನಲ್ಲಿ ನಾವೂ ಭಾಗಿಯಾಗುತ್ತೇವೆ ಎಂದು ಸಾಂತ್ವನ ಹೇಳಿದರು. ವೆಂಕಟೇಶ್ ಅವರು ರಾಜ್ಯದಲ್ಲಿ ಅಲ್ಲದೆ, ನೆರೆ ರಾಜ್ಯದಲ್ಲಿಯೂ ಸಹ ಆನೆ ಸೆರೆ ಕಾರ್ಯಾಚರಣೆ ಸೇರಿದಂತೆ ಅರಣ್ಯ ಇಲಾಖೆಗೆ ಸಾಕಷ್ಟು ಸಹಕಾರ ನೀಡಿದ್ದಾರೆ. ಹೀಗಾಗಿ ಇದನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ, ಕುಟುಂಬದ ಒಬ್ಬ ಸದಸ್ಯರಿಗೆ ಉದ್ಯೋಗ ನೀಡುವ ಬಗ್ಗೆ ಸಚಿವ ಸಂಪುಟದಲ್ಲಿ ಅನುಮತಿಗೆ ಶಿಫಾರಸ್ಸು ಮಾಡುವುದಾಗಿ ಸಚಿವರು ಹೇಳಿದರು.

> ಆನೆಗಳು ನಾಡಿಗೆ ಬಾರದಂತೆ ತಡೆಯಲು ಆನೆ ಬ್ಯಾರಿಕೇಡ್ ನಿರ್ಮಾಣಕ್ಕೆ ಸರ್ಕಾರ ಕ್ರಮ ಕೈಗೊಂಡಿದೆ. ಆದರೆ ರೈಲ್ವೆ ಹಳಿಗಳ ಲಭ್ಯತೆಯೂ ಕಡಿಮೆ ಇದೆ. ಈ ಹಿನ್ನೆಲೆಯಲ್ಲಿ 312 ಕಿ.ಮೀ. ರೈಲ್ವೆ ಬ್ಯಾರಿಕೇಡ್ ಅಳವಡಿಸಲು ಸಾಧ್ಯವಾಗಿದೆ. ಇನ್ನೂ 300 ಕಿ.ಮೀನಷ್ಟು ರೈಲ್ವೆ ಬ್ಯಾರಿಕೇಡ್ ನಿರ್ಮಿಸುವ ಅಗತ್ಯವಿದೆ. ಅದೇ ರೀತಿ ಪುಂಡಾನೆಗಳಿಗೆ ರೇಡಿಯೋ ಕಾಲರ್ ಅಳವಡಿಸಲಾಗುತ್ತಿದೆ. ಆನೆ ಕಂದಕ ನಿರ್ಮಾಣ ಮಾಡಲಾಗುತ್ತಿದೆ. ಜೊತೆಗೆ ಸೌರ ವಿದ್ಯುತ್ ತಂತಿ ಬೇಲಿ ಹಾಕಲಾಗುತ್ತಿದೆ.
>
> **– ಈಶ್ವರ ಖಂಡ್ರೆ,** ಸಚಿವರು.

ಕಸ್ತೂರಿ ರಂಗನ್ ವರದಿ ಜಾರಿ ಕುರಿತಂತೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕಸ್ತೂರಿ ರಂಗನ್ ವರದಿ 11 ವರ್ಷದಷ್ಟು ಹಳೆಯದಾಗಿದೆ. ತಮ್ಮನ್ನು ಸಂಜಯ್ ಕುಮಾರ್ ಸಮಿತಿ ಭೇಟಿ ಮಾಡಿದಾಗ, ಪಶ್ಚಿಮ ಘಟ್ಟ ಪ್ರದೇಶದ ಸಾರ್ವಜನಿಕರು, ಜನಪ್ರತಿನಿದಿಗಳು ಹಾಗೂ ಪರಿಸರವಾದಿಗಳೊಂದಿಗೆ ಸಮಾಲೋಚಿಸಿ, ಸಮಗ್ರ ತಿದ್ದುಪಡಿ ಮಾಡಿ ವರದಿ ಸಲ್ಲಿಸುವಂತೆ ತಿಳಿಸಿದ್ದು, ಅವರು ವರದಿ ನೀಡಿದ ತರುವಾಯ ಸಚಿವ ಸಂಪುಟದ ಉಪ ಸಮಿತಿಯಲ್ಲಿ ಚರ್ಚಿಸಿ ಅದರ ಜಾರಿ ಕುರಿತಂತೆ ಸಾಧಕ-ಬಾಧಕ ನೋಡಿಕೊಂಡು ನಿರ್ಧಾರ ಕೈಗೊಳ್ಳಲಾಗುವುದು ಎಂದರು.

ವೆಂಕಟೇಶ್ ಅವರು ಆನೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡ ವೇಳೆ ನಿರ್ಲಕ್ಷ್ಯ ಆಗಿದೆ ಎಂದು ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಉತ್ತರಿಸಿದ ಸಚಿವರು, ಈ ಬಗ್ಗೆ ಅರಣ್ಯ ಇಲಾಖೆ ಕೂಡ ತನಿಖೆ ನಡೆಸುತ್ತಿದೆ. ನಿರ್ಲಕ್ಷ್ಯ ಸಾಬೀತಾದರೆ ಕ್ರಮ ಜರುಗಿಸಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಉಪ ಅರಣ್ಯ ಇಲಾಖೆ ಅಧಿಕಾರಿಗಳು, ಸಕಲೇಶಪುರ ಉಪ ವಿಭಾಗಾಧಿಕಾರಿ ಡಾ. ಶೃತಿ, ತಹಸೀಲ್ದಾರ ಮಮತಾ ಸೇರಿದಂತೆ ಇತರರು ಹಾಜರಿದ್ದರು.

---



ಕೃಷ್ಣನ ವೇಷದಲ್ಲಿ ಅಥರ್ವ್ ತಳವಾರ ನರಗುಂದ



ಕೃಷ್ಣನ ವೇಷದಲ್ಲಿ ಸಾನ್ವಿಕ ಎಂ. ಎನ್ ಗದಗ



ರಾಧೆ ವೇಷದಲ್ಲಿ ದೃವಿಕಾ ನೇಮರಾಜ ಗದಗ



ಸಾನ್ವಿ ಈರಣ್ಣ ಸರ್ವಿ ಮುಂಡರಗಿ







ಶ್ರೀಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಗದಗ ಜಿಲ್ಲೆಯ ನರಗುಂದ ತಾಲೂಕಿನ ಚಿಕ್ಕನರಗುಂದ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಮುತ್ತು ರಾಯರಡ್ಡಿ ಹಾಗೂ ಅವರ ದರ್ಮಪತ್ನಿ ಅನುರಾಧಾ ಮುತ್ತು ರಾಯರಡ್ಡಿ ಇವರ ಪುತ್ರರಾದ ಶ್ರೀವರ್ ರಡ್ಡಿ ಹಾಗೂ ಶ್ರೀರಾಜ್ ರಡ್ಡಿ ಮುದ್ದು ಕೃಷ್ಣನ ವೇಷದಲ್ಲಿ.....

---

**ಬಿ.ಜಿ.ಅಣ್ಣಿಗೇರಿ ಗುರುಗಳ ಪುಣ್ಯಸ್ಮರಣೆ ವಾರ್ಷಿಕ ಸಭೆಯಲ್ಲಿ ತೋಂಟದ ಶ್ರೀ**

# ತ್ಯಾಗ ಗುಣಗಳಿಂದ ಅಮರತ್ವ ಪ್ರಾಪ್ತಿ

■ವಿಜಯಸಾಕ್ಷಿ ಸುದ್ದಿ, ಗದಗ




ಜೀವನದಲ್ಲಿ ತ್ಯಾಗ ಗುಣಗಳಿಂದ ಅಮರತ್ವ ಪ್ರಾಪ್ತಿಯಾಗುವದು. ಶಿಕ್ಷಣ ಪ್ರೇಮಿ, ತ್ಯಾಗಜೀವಿಯಾಗಿದ್ದ ದಿ. ಬಿ.ಜಿ.ಅಣ್ಣಿಗೇರಿ ಗುರುಗಳು ಅಂತಹ ಗುಣಗಳನ್ನು ಹೊಂದಿದ್ದರು ಎಂದು ಗದುಗಿನ ತೋಂಟದಾರ್ಯ ಮಠದ ಜ.ಡಾ.ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಅಭಿಪ್ರಾಯಪಟ್ಟರು.

ಅವರು ಮಂಗಳವಾರ ಗದುಗಿನ ಬಿ.ಜಿ.ಅಣ್ಣಿಗೇರಿ ಗುರುಗಳ ಆಶ್ರಮದಲ್ಲಿ ಶಿಕ್ಷಣ ಪ್ರೇಮಿ, ತ್ಯಾಗಜೀವಿ ಶ್ರೀ ಬಿ.ಜಿ.ಅಣ್ಣಿಗೇರಿ ಗುರುಗಳ ಪ್ರತಿಭಾ ಪ್ರತಿಷ್ಠಾನದಿಂದ ಏರ್ಪಡಿಸಿದ್ದ ಬಿ.ಜಿ.ಅಣ್ಣಿಗೇರಿ ಗುರುಗಳ 4ನೇ ಪುಣ್ಯಸ್ಮರಣೆ ಸಮಾರಂಭ ಮತ್ತು ವಾರ್ಷಿಕ ಸರ್ವಸಾಧಾರಣ ಸಭೆಯ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಬಡ ಹಾಗೂ ಪರ ಊರಿನ ವಿದ್ಯಾರ್ಥಿಗಳಿಗೆ ಆಶ್ರಯ ನೀಡಿ ಅವರ ಶಿಕ್ಷಣಕ್ಕೆ ನೆರವಾದವರು ಅಣ್ಣಿಗೇರಿ ಗುರುಗಳು. ಅವರ ಸಾವಿರಾರು ಶಿಷ್ಯರು ಇಂದು ದೊಡ್ಡ ದೊಡ್ಡ ಹುದ್ದೆಯಲ್ಲಿದ್ದಾರೆ ಎಂದು ಬಣ್ಣಿಸಿದರಲ್ಲದೆ ಬಿ.ಜಿ.ಅಣ್ಣಿಗೇರಿ ಗುರುಕುಲ ಆಶ್ರಮದ ಪದ್ಧತಿ ಅವರ ಅಗಲುವಿಕೆಯ ನಂತರದಲ್ಲಿಯೂ ಅಭಿವೃದ್ಧಿಯೊಂದಿಗೆ ಮುಂದುವರೆದಿರುವದು ಶ್ಲಾಘನೀಯ ಎಂದರು.

ಬಡ ಮಕ್ಕಳ ಶಿಕ್ಷಣಕ್ಕೆ ನೆರವಾಗಲು ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪುರಸ್ಕರಿಸುವಲ್ಲಿ ಬಿ.ಜಿ.ಅಣ್ಣಿಗೇರಿ ಗುರುಗಳ ಪ್ರತಿಭಾ ಪ್ರತಿಷ್ಠಾನ ಕ್ರಿಯಾಶೀಲತೆಯಿಂದ ಕಾರ್ಯ ಮಾಡುತ್ತಿರುವದು ಅಭಿನಂದನೀಯ. ಪ್ರತಿಷ್ಠಾನದ ಎಲ್ಲ ಪದಾಧಿಕಾರಿಗಳು ಸಹಕಾರ ಮತ್ತು ಸೇವಾಮನೋಭಾವನೆಯಿಂದ ಕೆಲಸ ಮಾಡುತ್ತಿದ್ದು, ಇದು ಹೀಗೆ ಮುಂದುವರೆಯಲಿ ಎಂದರು.

> ಕ್ಷರ ಎಂದರೆ ನಾಶ, ಅಕ್ಷರ ಎಂದರೆ ನಾಶ ಆಗಲಾರದ್ದು ಎಂದರ್ಥ. ಇಂತಹ ಅಕ್ಷರಗಳ ಶಿಕ್ಷಣ ನೀಡುವ ಮೂಲಕ ನಾಶ ಆಗಲಾರದ ಶಾಶ್ವತ ವಿದ್ಯಾ ಬುದ್ಧಿ ನೀಡಿದ ಗುರು ಸದಾವಕಾಲ ಸ್ಮರಣೀಯರಾಗಿದ್ದಾರೆ. ವಿದ್ಯೆ-ಬುದ್ಧಿ ನೀಡಿದ ಗುರುವಿಗೆ ನಾವು ವಿಧೇಯಕರಾಗಿ ನಡೆದುಕೊಳ್ಳಬೇಕು.
>
> **–ತೋಂಟದ ಶ್ರೀಗಳು**

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಅಣ್ಣಿಗೇರಿ ಗುರುಗಳ ಹಳೆಯ ವಿದ್ಯಾರ್ಥಿಯೂ ಹಿರಿಯ ವೈದ್ಯರೂ ಆದ ಗದುಗಿನ ಡಾ.ಎಸ್.ಬಿ.ಶೆಟ್ಟರ, ಅಣ್ಣಿಗೇರಿ ಗುರುಗಳ ವ್ಯಕ್ತಿತ್ವ, ಸಾಧನೆ, ಆಶ್ರಮದ ವ್ಯವಸ್ಥೆ, ವಿದ್ಯಾರ್ಥಿಗಳ ಕಲಿಕಾ ಆಸಕ್ತಿ ಕುರಿತು ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಪ್ರತಿಷ್ಠಾನದ ಅಧ್ಯಕ್ಷ ಶಿವಕುಮಾರ ಪಾಟೀಲ ಮಾತನಾಡಿ, ಪ್ರತಿಷ್ಠಾನದ ಧ್ಯೇಯೋದ್ದೇಶ, ಪ್ರತಿಷ್ಠಾನ ಮಾಡಿದ ಕಾರ್ಯ ಯೋಜನೆ, ದಾನಿಗಳ ಸಹಕಾರ ಕುರಿತು ವಿವರಿಸಿದರು.

ಆಶ್ರಮದ ವಿದ್ಯಾರ್ಥಿಗಳು ಹಾಗೂ ಬಸಲಿಂಗಪ್ಪ, ಈರಬಸಮ್ಮ ಪ್ರಾರ್ಥಿಸಿದರು. ಪ್ರತಿಷ್ಠಾನದ ಕಾರ್ಯದರ್ಶಿ ಎಸ್.ಕೆ.ಕಟ್ಟಿ ಸ್ವಾಗತಿಸಿ ವಾರ್ಷಿಕ ವರದಿ ವಾಚಿಸಿದರು, ಖಜಾಂಚಿ ಎಸ್.ಆರ್.ಪಾಟೀಲ ಪ್ರತಿಷ್ಠಾನದ ಲೆಕ್ಕಪತ್ರ ಸಾದರಪಡಿಸಿದರು. ಎಸ್.ಜಿ.ಅಣ್ಣಿಗೇರಿ, ಪ್ರವೀಣ ಮಡಿವಾಳರ, ಜಿ.ಬಿ.ಹಾವಣಗಿ, ಪ್ರವೀಣ ಮೊರಬದ, ಮಂಜುಳಾ, ಜ್ಯೋತಿ, ಗಂಗಾ ಅವರಿಗೆ ಗುರುಕಾಣಿಕೆ ನೀಡಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ದಾನಿಗಳನ್ನು ಗೌರವಿಸಲಾಯಿತು.

ಪರಿಶುರಾಮ ಮಂಗಳಗುಡ್ಡ ಹಾಗೂ ವಿಠ್ಠಲ ಹೂಗಾರ ಅವರಿಂದ ಸಂಗೀತ ಜರುಗಿತು. ಕಳಕಪ್ಪ ಕುರ್ತಕೋಟಿ ನಿರೂಪಿಸಿದರು. ಕೊನೆಗೆ ಎಸ್.ಜಿ.ಅಣ್ಣಿಗೇರಿ ವಂದಿಸಿದರು. ಕಾರ್ಯಕ್ರಮದಲ್ಲಿ ಪ್ರತಿಷ್ಠಾನದ ಪದಾಧಿಕಾರಿಗಳು, ಹಳೆ ವಿದ್ಯಾರ್ಥಿಗಳು ಹಾಗೂ ಪಾಲಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka